01 ಇ-ಲ

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 1828

ಸದಸ್ಯರ ಹೆಸರು : ಶ್ರೀ ಯಶವಂತರಾಯಗೌಡ ವಿಠ್ಠಲಗೌಡ ಪಾಟೀಲ್ (ಇಂಡಿ)

ಉತ್ತರಿಸುವ ದಿನಾಂಕ : 17-03-2021

ಉತ್ತರಿಸುವ ಸಚಿವರು : ಕೃಷಿ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ.	ರಾಜ್ಯದಲ್ಲಿ ಕೃಷಿ ಇಲಾಖೆಯಡಿ ಬರುವ ಕೃಷಿ ಭಾಗ್ಯ ಯೋಜನೆಯನ್ನು ಸ್ಥಗಿತಗೊಳಿಸಲಾಗಿದೆಯೇ;	ಸರ್ಕಾರದ ಆದೇಶ ಸಂಖ್ಯೆ:ಕೃಇ 08, ಕೃಯೋಕ 2014 ದಿನಾಂಕ:22-07-2014 ರನ್ವಯ ಕೃಷಿ ಭಾಗ್ಯ ಯೋಜನೆಯನ್ನು ಮಿಷನ್ ಮೋಡ್ ಮಾದರಿಯಲ್ಲಿ ಹಂತಹಂತವಾಗಿ ಐದು ವರ್ಷಗಳಲ್ಲಿ ಅನುಷ್ಠಾನಗೊಳಿಸಲು ಆದೇಶಿಸಲಾಗಿರುತ್ತದೆ. 2020-21ನೇ ಸಾಲಿನಲ್ಲಿ ಕೃಷಿ ಭಾಗ್ಯ ಯೋಜನೆಯಡಿ ಕಳೆದ ಸಾಲಿನಲ್ಲಿ ಅನುಷ್ಠಾನಗೊಂಡಿರುವ ಕೃಷಿಹೊಂಡ ಹಾಗೂ ಪೂರಕ ಘಟಕಗಳ ಬಾಕಿ ಸಹಾಯಧನ ಪಾವತಿಗೆ ರೂ.40.00 ಕೋಟಿ ಅನುದಾನ ನಿಗಧಿಯಾಗಿರುತ್ತದೆ. ಆದರೆ, ಹೊಸದಾಗಿ ಯಾವುದೇ ಚಟುವಟಿಕೆಗಳನ್ನು ತೆಗೆದುಕೊಳ್ಳುವುದಕ್ಕೆ ಅವಕಾಶವಿರುವುದಿಲ್ಲ. As per Govt - Order No. ಕೃಇ 08, ಕೃಯೋಕ 2014 dated:22-07-2014, Krishi bhagya Scheme is to be implemented in a mission mode for a period of 5 years. During the current year 2020-21, grant of Rs.40.00 crores has been allocated under Krishi Bhagya Scheme for pending subsidy payments of Farm ponds and allied components implemented in the previous year. But, there is no provision to undertake new activities during the current year.
ಆ.	ಸ್ಥಗಿತಗೊಳಿಸಲು ಕಾರಣಗಳೇನು; (ವಿವರ ನೀಡುವುದು)	

ಇ.	ಸದರಿ ಯೋಜನೆಯಡಿ ಮಂಜೂರು ಮಾಡಿದ್ದ ಕೃಷಿ ಹೊಂಡಗಳು ಬರಪೀಡಿತ ಪ್ರದೇಶಗಳ ರೈತರುಗಳಿಗೆ ಸಂಜೀವಿನಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ರಾಜ್ಯದ ಮಳೆಯಾಶ್ರಿತ ಕೃಷಿಯನ್ನು ಸುಸ್ಥಿರ ಕೃಷಿಯನ್ನಾಗಿ ರೂಪಾಂತರಗೊಳಿಸುವುದು, ಸಮರ್ಪಕ ಮಳೆ ನೀರಿನ ಸಂಗ್ರಹಣೆ ಹಾಗೂ ಉಪಯುಕ್ತ ಬಳಕೆ ಪದ್ಧತಿಯಿಂದ ಕೃಷಿ ಉತ್ಪಾದಕತೆಯನ್ನು ಉತ್ತಮ ಪಡಿಸುವುದು ಮತ್ತು ಆದಾಯವನ್ನು ಹೆಚ್ಚಿಸುವುದು. ಬಿದ್ದ ಮಳೆ ನೀರನ್ನು ವ್ಯರ್ಥ ಮಾಡದೆ ಆಯ್ದ ಸ್ಥಳದಲ್ಲಿ ಕೃಷಿಹೊಂಡ ತೆಗೆದು ಜಲ ಸಂಗ್ರಹಿಸಿ ಸಂದಿಗ್ಧ ಹಂತಗಳಲ್ಲಿ ರಕ್ಷಣಾತ್ಮಕ ನೀರಾವರಿ ಒದಗಿಸುವುದು ಈ ಯೋಜನೆಯ ಮುಖ್ಯ ಉದ್ದೇಶವಾಗಿದ್ದು, ಈ ನಿಟ್ಟಿನಲ್ಲಿ ಕೃಷಿ ಹೊಂಡಗಳು ಬರಪೀಡಿತ ಪ್ರದೇಶಗಳಲ್ಲಿ ರೈತರುಗಳಿಗೆ ಉಪಯುಕ್ತವಾಗಿರುವುದನ್ನು ಗಮನಿಸಲಾಗಿರುತ್ತದೆ.. The main objective of the scheme is to improve rain fed agriculture scenario with the efficient management of rain water to enhance the farm productivity. Thrust is being given to conserve rain water and to utilize it during critical stages of crop production by constructing farm ponds in dryland areas. Hence, it has been observed that farm ponds are beneficial to dryland farmers.
ಈ.	ಹಾಗಿದ್ದಲ್ಲಿ, ರೈತರ ಜೀವನಾಡಿಯಾಗಿರುವ ಕೃಷಿಹೊಂಡಗಳ ನಿರ್ಮಾಣಕ್ಕೆ ಅಥವಾ ಹೊಸದಾಗಿ ಕೃಷಿ ಹೊಂಡಗಳ ಮಂಜೂರಾತಿಗೆ ಸರ್ಕಾರ ಆಸಕ್ತಿ ವಹಿಸಿದೆಯೆ;	ಪ್ರಸಕ್ತ ಸಾಲಿನಲ್ಲಿ ನರೇಗ ಯೋಜನೆಯಡಿ ಹಾಗೂ ಜಲಾನಯನ ಅಭಿವೃದ್ಧಿ ಇಲಾಖೆ ವತಿಯಿಂದ ಕೃಷಿ ಹೊಂಡಗಳ ನಿರ್ಮಾಣ ಮಾಡಲಾಗುತ್ತಿದೆ. During the current year, Farm ponds are constructed under MGNREGA scheme and by Watershed Development department.
ಉ.	ಇಲ್ಲದಿದ್ದಲ್ಲಿ, ಇದೇ ಮಾದರಿಯಲ್ಲಿ ಬೇರೆ ಯಾವ ಯಾವ ಯೋಜನೆಗಳನ್ನು	ಕ್ಷೇತ್ರ ಮಟ್ಟದಲ್ಲಿ, ಕೃಷಿ ಹೊಂಡಗಳನ್ನು ಜಲಾನಯನ ಅಭಿವೃದ್ಧಿ ಇಲಾಖೆ ವತಿಯಿಂದ ಹಾಗೂ ಗ್ರಾಮೀಣಾಭಿವೃದ್ಧಿ

	ಜಾರಿಗೆ ತರಲಾಗುವುದು?(ವಿವರ ನೀಡುವುದು)	ಮತ್ತು ಪಂಚಾಯಿತ್ ರಾಜ್ ಇಲಾಖಾವತಿಯಿಂದ ನರೇಗಾ ಯೋಜನೆಯಡಿ ನಿರ್ಮಾಣ ಮಾಡಲಾಗುತ್ತಿದೆ. Farm ponds are being constructed by Watershed Development department and through MGNREGA scheme of Rural Development & Panchayat Raj department.

ಸಂಖ್ಯೆ: AGRI-AML/82/2021

(ಬಿ.ಸಿ. ಪಾಟೀಲ್)
ಕೃಷಿ ಸಚಿವರು

02

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 2844
ಸದಸ್ಯರ ಹೆಸರು : ಶ್ರೀ ಶ್ರೀನಿವಾಸ್ ಎಂ. (ಮಂಡ್ಯ)
ಉತ್ತರಿಸಬೇಕಾದ ದಿನಾಂಕ : 17-03-2021.
ಉತ್ತರಿಸುವ ಸಚಿವರು : ಮಾನ್ಯ ಕೈಮಗ್ಗ ಮತ್ತು ಜವಳಿ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಸಚಿವರು.

ಕ್ರ.ಸಂ.	ಪ್ರಶ್ನೆಗಳು	ಉತ್ತರಗಳು
ಅ.	ಮಂಡ್ಯ ಜಿಲ್ಲೆಯಲ್ಲಿ ಈವರೆಗೂ ಮಂಜೂರಾಗಿರುವ ಶಾದಿ ಮಹಲ್‌ಗಳ ಸಂಖ್ಯೆ ಎಷ್ಟು; (ವಿಧಾನಸಭಾ ಕ್ಷೇತ್ರವಾರು ಸಂಪೂರ್ಣ ವಿವರ ನೀಡುವುದು)	ಮಂಡ್ಯ ಜಿಲ್ಲೆಯಲ್ಲಿ ಈವರೆಗೂ ಮಂಜೂರಾಗಿರುವ ಶಾದಿಮಹಲ್‌ಗಳ ವಿಧಾನಸಭಾ ಕ್ಷೇತ್ರವಾರು ವಿವರವನ್ನು **ಅನುಬಂಧದಲ್ಲಿ** ನೀಡಲಾಗಿದೆ.
ಆ.	ಕಳೆದ 03 ವರ್ಷಗಳಲ್ಲಿ ಮಂಡ್ಯ ನಗರಕ್ಕೆ ಮಂಜೂರಾಗಿರುವ ಶಾದಿಮಹಲ್ ಕಟ್ಟಡಗಳು ಪ್ರಸ್ತುತ ಯಾವ ಹಂತದಲ್ಲಿವೆ, ಈವರೆಗೂ ಕಟ್ಟಡ ಕಾಮಗಾರಿ ಅಪೂರ್ಣವಾಗಿ ಉಳಿದಿರಲು ಕಾರಣವೇನು;	ಕಳೆದ 03 ವರ್ಷಗಳಲ್ಲಿ ಮಂಡ್ಯ ನಗರಕ್ಕೆ ಹೊಸ ಮುಸ್ಲಿಂ ಶಾದಿಮಹಲ್ ನಿರ್ಮಾಣಕ್ಕೆ ಯಾವುದೇ ಅನುದಾನ ಮಂಜೂರು ಮಾಡಿರುವುದಿಲ್ಲ.
ಇ	ಸದರಿ ಕಟ್ಟಡಗಳ ಕಾಮಗಾರಿಗಳನ್ನು ಪೂರ್ಣಗೊಳಿಸಿ ಯಾವಾಗ ಉದ್ಘಾಟಿಸಲಾಗುವುದು?	ಶಾದಿಮಹಲ್ ಕಟ್ಟಡ ಕಾಮಗಾರಿಗಳಿಗೆ ಬಿಡುಗಡೆಗೆ ಬಾಕಿಯಿರುವ ಅನುದಾನವನ್ನು ಒಂದು ಬಾರಿಗೆ ಬಗೆಹರಿಸಲು (One time settlement) ಸರ್ಕಾರಕ್ಕೆ ಪ್ರಸ್ತಾವನೆ ಬಂದಿದ್ದು, ಪರಿಶೀಲನಾ ಹಂತದಲ್ಲಿರುತ್ತದೆ. ಬಾಕಿ ಅನುದಾನ ಬಿಡುಗಡೆಯಾದ ನಂತರ ಕಾಮಗಾರಿ ಪೂರ್ಣಗೊಳಿಸಲು ಹಾಗೂ ಉದ್ಘಾಟನೆಗೆ ಕ್ರಮವಹಿಸಲಾಗುವುದು.

ಸಂಖ್ಯೆ: **MWD 122 LMQ 2021**

(ಶ್ರೀಮಂತ ಬಾಳಾಸಾಹೇಬ ಪಾಟೀಲ್)
ಕೈಮಗ್ಗ, ಜವಳಿ ಹಾಗೂ ಅಲ್ಪಸಂಖ್ಯಾತರ
ಕಲ್ಯಾಣ ಸಚಿವರು

KARNATAKA LEGISLATIVE ASSEMBLY

1.	Starred Question No.	: 2844
2.	Name of the Member	: Sri Srinivas M (Mandya)
3.	Date of reply	: 17 -03-2021.
4.	Replies to be given by	: Hon'ble Minister for Handloom, Textile & Minority Welfare.

	Question	Answers
A)	How many Shaadi Mahals are sanctioned to Mandya District till date? (Furnish full detail Constituency wise)	Details of Shaadi Mahals sanctioned to Mandya District constituency wise are furnished in **Annexure.**
B)	Present stage of Shaadi Mahal buildings sanctioned to Mandya Town during the last 03 years, What are reasons for the works remain incomplete.	During last 3 years, no amount is sanctioned to Mandya Town for construction of new Muslim Shaadi Mahals.
C)	When the works will be completed and inaugurated?	A proposal for one time settlement of release of balance grants to the construction of Shadi Mahal has been submitted to the Government, the same is under examination. Action for completion of works and inauguration will be taken up after the release of remaining grants.

No. MWD 122 LMQ 2021

(Shrimant Balasaheb Patil)
Minister for Handloom,Textile &
Minority Welfare

ಮಾನ್ಯ ವಿಧಾನಸಭೆ ಸದಸ್ಯರಾದ ಶ್ರೀ ಶ್ರೀನಿವಾಸ್ ಎಂ (ಮಂಡ್ಯ) ರವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 2844 ಕ್ಕೆ ಅನುಬಂಧ-1

ಮಂಡ್ಯ ಜಿಲ್ಲೆಯಲ್ಲಿ ಈವರೆಗೂ ಮಂಜೂರಾಗಿರುವ ಶಾದಿಮಹಲ್‌ಗಳ ಸಂಖ್ಯೆಗಳ ವಿಧಾನಸಭಾ ಕ್ಷೇತ್ರವಾರು ವಿವರ

ಕ್ರ ಸಂ.	ವಿಧಾನ ಸಭಾ ಕ್ಷೇತ್ರ	ಮಂಜೂರಾಗಿರುವ ಶಾದಿ ಮಹಲ್‌ಗಳ ಸಂಖ್ಯೆ.	ಸಂಸ್ಥೆಯ ಹೆಸರು	ಸ್ಥಳ	ಮಂಜೂರಾದ ಆರ್ಥಿಕ ವರ್ಷ	ಮಂಜೂರಾದ ಅನುದಾನ	ಬಿಡುಗಡೆ ಯಾದ ಅನುದಾನ	ಕಾಮಗಾರಿಯ ಪ್ರಗತಿ ಹಂತ
1	ಮಂಡ್ಯ	3	ಮಸ್ಜೀದ್ – ಎ – ಆಜಂ	100 ಅಡಿ ರಸ್ತೆ, ಗಾಂಧಿನಗರ, ಮಂಡ್ಯ.	2007–08	85.00	45.00	ಮೊದಲನೇ ಮಹಡಿಯ ಆರ್.ಸಿ.ಸಿ. ಕೆಲಸ ನೆಲ ಹಾಸು ಕಾಮಗಾರಿಗಳು ಬಾಕಿ ಇರುತ್ತದೆ.
2			ಅಲ್-ಜಮಾ-ಅತುಲ್ ಮಲಬರಿಯಾ	ಆನೆಕೆರೆ ಬೀದಿ, ಮಂಡ್ಯ	2012–13	45.00	45.00	ಮಹಡಿಯ ಮೇಲ್ಛಾವಣಿ ಕಾಮಗಾರಿಯು ಪ್ರಗತಿಯಲ್ಲಿರುತ್ತದೆ.
3			ನೂರಾನಿ ಮಸ್ಜೀದ್	ಹಾಲಹಳ್ಳಿ, ಮಂಡ್ಯ.	2005–06	85.00	85.00	ಕಾಮಗಾರಿಯು ಪೂರ್ಣಗೊಂಡಿರುತ್ತದೆ.
4	ಮಳವಳ್ಳಿ	2	ಮಸ್ಜೀದ್ – ಎ– ಖೂಬಾ	ಕೋಟೆ, ಮಳವಳ್ಳಿ	2005–06	17.50	17.50	ಮಹಡಿಯ ಮೇಲ್ಛಾವಣಿ ಕಾಮಗಾರಿಯು ಪ್ರಗತಿಯಲ್ಲಿರುತ್ತದೆ.
5			ಶ್ರೀ ಅಂಜುಮನ್ – ಎ– ಮಹದವಿಯ	ಕಿರುಗಾವಲು	2003–04	20.00	20.00	ಎಲೆಕ್ಟ್ರಿಕಲ್, ಶೌಚಾಲಯ, ಸ್ನಾನ ಗೃಹದ ಕೆಲಸಗಳು ಬಾಕಿ ಇರುತ್ತದೆ.
6	ಮದ್ದೂರು	1	ಮಸ್ಜೀದ್ – ಇ– ಮೌಜುಂ	ಬೆಸಗರಹಳ್ಳಿ,	2005–06	2.50	2.50	ಪ್ರಾರಂಭಿಸಿರುವುದಿಲ್ಲ.
7	ಶ್ರೀರಂಗಪಟ್ಟಣ	–	–	–	–	–	–	–
8	ಮೇಲುಕೋಟೆ	–	–	–	–	–	–	–

ಕ್ರ ಸಂ.	ವಿಧಾನ ಸಭಾ ಕ್ಷೇತ್ರ	ಮಂಜೂರಾಗಿರುವ ಶಾದಿ ಮಹಲ್‌ಗಳ ಸಂಖ್ಯೆ.	ಸಂಸ್ಥೆಯ ಹೆಸರು	ಸ್ಥಳ	ಮಂಜೂರಾದ ಆರ್ಥಿಕ ವರ್ಷ	ಮಂಜೂರಾದ ಅನುದಾನ	ಬಿಡುಗಡೆ ಯಾದ ಅನುದಾನ	ಕಾಮಗಾರಿಯ ಪ್ರಗತಿ ಹಂತ
9	ನಾಗಮಂಗಲ	3	ಜಾಮೀಯ ಮಸ್ಜೀದ್	ಬೆಳ್ಳೂರು,	2005-06	45.00	32.50	ಕಟ್ಟಡದ ಮೇಲ್ಮಹಡಿಯ ಕೆಲಸ ಬಾಕಿ ಇದ್ದು, ಪ್ಲಾಸ್ಟರಿಂಗ್, ಕಿಟಕಿ, ನೆಲಹಾಸು ಕಾಮಗಾರಿಯು ಬಾಕಿ ಇರುತ್ತದೆ.
10			ಮುಸ್ಲಿಂ ವೆಲ್‌ಫೇರ್ ಅಸೋಷಿಯೇಷನ್ (ರಿ.)	ನಾಗಮಂಗಲ ಟೌನ್	2012-13	10.00	10.00	ಕಟ್ಟಡದ ತಳಪಾಯ ಕಾಮಗಾರಿಯು ಪ್ರಗತಿಯಲ್ಲಿರುತ್ತದೆ.
11			ಪ್ರಥಮ ತೀರ್ಥಂಕರ ಭಗವಾನ್ ಶ್ರೀ ಆದಿನಾಥ ಸ್ವಾಮಿ ಶ್ರವಣರತ್ನ ಸುಲಭ ಸಾಗರ	ಕಂಬದಹಳ್ಳಿ	2007-08	30.00	30.00	ಕಟ್ಟಡದ ಆರ್.ಸಿ.ಸಿ. ಕಾಮಗಾರಿ ಪ್ಲಾಸ್ಟರಿಂಗ್ ಕೆಲಸ ಮುಗಿದಿದ್ದು, ಬಾಗಿಲು, ಕಿಟಕಿ, ನೆಲಹಾಸು ಕಾಮಗಾರಿಯು ಬಾಕಿ ಇರುತ್ತದೆ.
12	ಕೆ.ಆರ್.ಪೇಟೆ	2	ಜಾಮೀಯ ಮಸ್ಜೀದ್	ದೊಡ್ಡ ಯಾಚೇನಹಳ್ಳಿ	2011-12	10.00	10.00	ಕಟ್ಟಡದ ತಳಪಾಯದ ಕಾಮಗಾರಿಯು ಪ್ರಗತಿಯಲ್ಲಿರುತ್ತದೆ.
13			ಜಾಮೀಯ ಮಸ್ಜೀದ್	ಆಲಂಬಾಡಿ ಕಾವಲ್	20018-20	100.00	25.00	ಕಟ್ಟಡದ ತಳಪಾಯ ಕಾಮಗಾರಿಯು ಪ್ರಗತಿಯಲ್ಲಿರುತ್ತದೆ.

ಕರ್ನಾಟಕ ವಿಧಾನ ಸಭೆ

2-C
03
17-03-2021

ಸದಸ್ಯರ ಹೆಸರು	:	ಶ್ರೀ. ಸಿದ್ದು ಸವದಿ (ತೇರದಾಳ)
ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	:	2831
ಉತ್ತರಿಸುವ ಸಚಿವರು	:	ಮಾನ್ಯ ಕೈಮಗ್ಗ ಮತ್ತು ಜವಳಿ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಸಚಿವರು
ಉತ್ತರಿಸಬೇಕಾದ ದಿನಾಂಕ	:	17.03.2021.

ಕ್ರ ಸಂ	ಪ್ರಶ್ನೆ	ಉತ್ತರ	Answer
ಅ)	ಕೊರೋನಾ ಸಮಯದಲ್ಲಿ ಸುಮಾರು 6 ತಿಂಗಳವರೆಗೆ ನೇಕಾರರ ಪವರ್‌ಲೂಮ್‌ಗಳು ಸಂಪೂರ್ಣ ಸ್ಥಗಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿದೆ	Yes
ಆ)	ಬಂದಿದ್ದಲ್ಲಿ, ಸದರಿ ಉದ್ಯೋಗದ ಮೇಲೆ ಅವಲಂಬಿತರಾದ ನೇಕಾರರಿಗೆ ದೊಡ್ಡ ಮಟ್ಟದ ಹಾನಿಯುಂಟಾಗಿದ್ದು, ಲಾಕ್‌ಡೌನ್ ನಿಂದ ಸೀರೆಗಳು ಮಾರಾಟವಾಗದೆ ಮತ್ತು ನೇಕಾರರಿಗೆ ಮಜೂರಿ ಇಲ್ಲದೆ ಹಾನಿ ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಯಾವ ಕ್ರಮ ಕೈಗೊಳ್ಳಲಾಗಿದೆ.	ಕೋವಿಡ್-19 ಪ್ರಯುಕ್ತ ವಿದ್ಯುತ್ ಮಗ್ಗ ನೇಕಾರರಿಗೆ ಆರ್ಥಿಕ ಬೆಂಬಲ ನೀಡುವ ಸಲುವಾಗಿ ವಿದ್ಯುತ್ ಚಾಲಿತ ಘಟಕ/ ಮಗ್ಗಗಳಲ್ಲಿ ಕೆಲಸ ಮಾಡುತ್ತಿರುವ ಒಬ್ಬ ಕೂಲಿ ನೇಕಾರ ಕಾರ್ಮಿಕರಿಗೆ ಒಂದು ಬಾರಿಗೆ ಮಾತ್ರ ಅನ್ವಯಿಸುವಂತೆ ರೂ.2000/-ಗಳ ಪರಿಹಾರ ಧನ ನೀಡುವ ಯೋಜನೆಯನ್ನು ಜಾರಿಗೆ ತಂದು, ಡಿ.ಬಿ.ಟಿ ಮೂಲಕ ಸಹಾಯಧನವನ್ನು ಸಂಬಂಧಿಸಿದ ನೇಕಾರರಿಗೆ ವರ್ಗಾಯಿಸಲಾಗುತ್ತಿದೆ. ಇದು ವರೆವಿಗೂ 59,779 ಫಲಾನುಭವಿಗಳು ಸೇವಾ ಸಿಂಧು ಪೋರ್ಟಲ್ ನಲ್ಲಿ ಅರ್ಜಿ ಸಲ್ಲಿಸಿದ್ದು, 51,249 ಫಲಾನುಭವಿಗಳಿಗೆ ಡಿ.ಬಿ.ಟಿ ಮೂಲಕ ಹಣ ವರ್ಗಾಯಿಸಲಾಗಿದೆ. • ಎಂ.ಎಸ್.ಎಂ.ಇ ರಡಿಯಲ್ಲಿ ಬರುವ ವಿದ್ಯುತ್ ಮಗ್ಗ ಹಾಗೂ ಮಗ್ಗ ಪೂರ್ವ ಘಟಕಗಳಿಗೆ ಕೋವಿಡ್-19 ಸಂಕಷ್ಟದ ಸಮಯ ಏಪ್ರಿಲ್ ಮತ್ತು ಮೇ-2020ರ ಮಾಹೆಗಳಿಗೆ ವಿದ್ಯುತ್ ಬಿಲ್ಲಿನ ನಿಗದಿತ ಶುಲ್ಕ(Fixed charges) ವನ್ನು ಮನ್ನಾ ಮಾಡಲಾಗಿರುತ್ತದೆ.	• To assist the Power loom worker/weaver, who are in distress due to Covid-19 pandemic Government has come out with, one time assistance of Rs.2000/- to Power loom worker/ weavers. As on 12th march 2021, 59,779 applicants have applied in Seva Sindhu portal, out of this 51,249 beneficiaries were transferred the benefit through DBT. • During Covid-19 distress time the Power loom and Pre-loom units coming under MSME were waived off fixed charges in the electricity bills for the month of April and May-2020.

		• ಸರ್ಕಾರದ ಆದೇಶ ಸಂಖ್ಯೆ: CI 46 JAKY 2020, ದಿನಾಂಕ: 16.05.2020ರನ್ವಯ ನೇಕಾರರು ನೇಕಾರಿಕೆ ಉದ್ದೇಶಕ್ಕಾಗಿ ವಿವಿಧ ಸಹಕಾರ ಸಂಘಗಳಿಂದ ಮತ್ತು ಸಹಕಾರ ಬ್ಯಾಂಕುಗಳಿಂದ ಸಾಲ ಪಡೆದು ದಿನಾಂಕ: 01.01.2019 ರಿಂದ 31.03.2019 ರ ಅವಧಿ ಯೊಳಗೆ ಪಾವತಿಸಿದಂತಹ ನೇಕಾರರಿಗೂ ಸಹ ರೂ.1.00 ಲಕ್ಷಗಳವರೆಗಿನ (ಅಸಲು ಮತ್ತು ಬಡ್ಡಿ ಸೇರಿ) ಸಾಲ ಮನ್ನಾ ಯೋಜನೆಯನ್ನು ವಿಸ್ತರಿಸಿ, ಅವರುಗಳು ಪಾವತಿ ಮಾಡಿದಂತಹ ಸಾಲದ ಮೊತ್ತವನ್ನು ಮರು ಪಾವತಿಸಲು ಆದೇಶವನ್ನು ಹೊರಡಿಸಿ, ಇದುವರೆವಿಗೂ 1586 ನೇಕಾರ ಫಲಾನುಭವಿಗಳಿಗೆ ರೂ. 5,42,06,919/-ಗಳ ಅನುದಾನವನ್ನು ನೀಡಲಾಗಿದೆ.	• As per Government order No: CI 46 JAKY 2020, dated 16.05.2020 weavers who have availed loan from various Co-operative banks and societies and who have repaid their loan and interest during the period of 01.01.2019 to 31.03.2019 upto 1.00 lakh, were eligible for reimbursement of amount paid during the said period and loan weaver scheme has been extended to the weavers during covid-19 pandemic and till date Rs. 5,42,06,919/- grant has been paid to 1586 weaver beneficiaries.
ಇ)	ಲಾಕ್‌ಡೌನ್‌ನಿಂದ ಮಾರಾಟ ವಾಗದೇ ಉಳಿದ ಸುಮಾರು 10 ಲಕ್ಷ ಸೀರೆಗಳ ದಾಸ್ತಾನು ಸರ್ಕಾರವೇ ಖರೀದಿಸಿ ಇತರೆ ಇಲಾಖೆಯಲ್ಲಿ ಕೆಲಸ ಮಾಡುವ ನೌಕರರಿಗೆ ಹಂಚಲು ಬೇಡಿಕೆಯಿಟ್ಟಿದ್ದು ನಿಜವೇ; ಹಾಗಿದ್ದಲ್ಲಿ ಈ ಪ್ರಕ್ರಿಯೆ ಯಾವ ಹಂತದಲ್ಲಿದೆ;	ಹೌದು. ಕೋವಿಡ್-19 ಸಾಂಕ್ರಾಮಿಕ ರೋಗದಿಂದ ಲಾಕ್‌ಡೌನ್ ಆದ ಕಾರಣ ಸಂಕಷ್ಟಕ್ಕೀಡಾಗಿರುವ ವಿದ್ಯುತ್‌ಮಗ್ಗ ನೇಕಾರರ ನೆರವಿಗಾಗಿ ಉತ್ಪಾದಿಸಿದ 6 ಲಕ್ಷ ಸೀರೆಗಳ ದಾಸ್ತಾನು ಖರೀದಿಸಿ ಕೋವಿಡ್-19ಗಾಗಿ ಶ್ರಮಿಸುತ್ತಿರುವ ವಿವಿಧ ಇಲಾಖೆಗಳ ಮಹಿಳಾ ಕಾರ್ಯಕರ್ತೆಯರಿಗೆ ಉಚಿತವಾಗಿ ಸೀರೆಗಳನ್ನು ಒದಗಿಸುವ ಪ್ರಸ್ತಾವನೆಗೆ ಈ ಹಿಂದೆ ದಿನಾಂಕ: 18.08.2020 ರಂದು ಆರ್ಥಿಕ ಇಲಾಖೆಯ ಸಹಮತಿ ಕೋರಲಾಗಿ ಪ್ರಸ್ತಾವನೆಯು ತಿರಸ್ಕೃತವಾಗಿದ್ದರ ಹಿನ್ನೆಲೆಯಲ್ಲಿ, ದಿನಾಂಕ: 02.12.2020 ರಂದು ಪ್ರಸ್ತಾವನೆಗೆ ಮತ್ತೊಮ್ಮೆ ಆರ್ಥಿಕ ಇಲಾಖೆಯ ಸಹಮತಿ ಕೋರಲಾಗಿ, ಆರ್ಥಿಕ ಇಲಾಖೆಯು ಪ್ರಸ್ತಾವನೆಯನ್ನು ತಿರಸ್ಕರಿಸಿರುತ್ತದೆ.	Yes. To assist the Power loom weavers who are in distress due to covid-19 pandemic, it was proposed to the Finance Department on 18.08.2020 to purchase 6 lakh sarees produced from Power loom weavers for free distribution to women workers of various Departments who are working as Corona Warriors, but the Finance Department rejected the proposal. Although, once again the same proposal was resubmitted on 02-12-2020 for Finance Department's concurrence. But Finance Department has rejected the proposal.

...3

ಈ)	ಇಲ್ಲವಾದಲ್ಲಿ ಬಡ ನೇಕಾರರಿಗೆ ಯಾವ ರೀತಿ ನ್ಯಾಯ ಒದಗಿಸ ಲಾಗುವುದು? (ವಿವರ ನೀಡುವುದು).	• ಕೋವಿಡ್-19 ರಿಂದ ಸಂಕಷ್ಟ ಕ್ಕೀಡಾಗಿರುವ ಕೈಮಗ್ಗದ ನೇಕಾರರಿಗೆ ನೇಕಾರ ಸಮ್ಮಾನ್ ಯೋಜನೆ ಯನ್ನು ಜಾರಿಗೆ ತರಲಾಗಿದೆ. • ಕೋವಿಡ್-19 ಪ್ರಯುಕ್ತ ವಿದ್ಯುತ್ ಮಗ್ಗ ನೇಕಾರರಿಗೆ ಆರ್ಥಿಕ ಬೆಂಬಲ ನೀಡುವ ಸಲುವಾಗಿ ಒಂದು ಬಾರಿಗೆ ಅನ್ವಯಿಸುವಂತೆ ರೂ.2000/-ಗಳ ಪರಿಹಾರಧನ ನೀಡುವ ಯೋಜನೆ ಯನ್ನು ಜಾರಿಗೆ ತರಲಾಗಿದೆ ಹಾಗೂ ನೇಕಾರರಿಗೆ ಸಾಲ ಮನ್ನಾ ಯೋಜನೆಯನ್ನು ಪ್ರಸಕ್ತ ಸಾಲಿನಲ್ಲಿ ಜಾರಿಗೆ ತರಲಾಗಿದೆ. • ವಿದ್ಯುತ್ ರಿಯಾಯಿತಿ ಯೋಜನೆ ಯಡಿ 01 ರಿಂದ 20 ಹೆಚ್.ಪಿ ವರೆಗೆ ಸಂಪರ್ಕ ಹೊಂದಿರುವ ವಿದ್ಯುತ್ ಮಗ್ಗ ಹಾಗೂ ಮಗ್ಗ ಪೂರ್ವ ಘಟಕಗಳಿಗೆ ರಿಯಾಯಿತಿ ದರದಲ್ಲಿ ವಿದ್ಯುತ್ ಸರಬರಾಜು ಮಾಡಲಾಗುತ್ತಿದೆ. ಪ್ರಸ್ತುತ ಆರ್ಥಿಕ ಚಟುವಟಿಕೆಗಳು ಸಹಜ ಸ್ಥಿತಿಗೆ ಮರಳುತ್ತಿದೆ.	• Nekar Samman Scheme was launched to assist to handloom weavers, who were in distress due to Covid-19. • To assist Power loom workers/weavers who are in distress due to Covid-19, one time assistance of Rs.2000/- was launched and Loan waiver scheme for weavers was also in force during this year. • Under Power Subsidy Scheme, the Power-loom and Pre-loom units which are having power connection from 01 to 20 HP were being provided electricity at subsidized rate. In recent days economic activities were returning to normal condition.

ಸಂ: CI 63 JAKE 2021

(ಶ್ರೀಮಂತ ಬಾಳಾಸಾಹೇಬ ಪಾಟೀಲ್)
ಕೈಮಗ್ಗ ಮತ್ತು ಜವಳಿ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 2520

ಸದಸ್ಯರ ಹೆಸರು : ಶ್ರೀಮತಿ ರೂಪಾಲಿ ಸಂತೋಷ್ ನಾಯ್ಕ್

ಉತ್ತರಿಸುವ ಸಚಿವರು : ಉಪ ಮುಖ್ಯಮಂತ್ರಿಗಳು ಹಾಗೂ ಸಾರಿಗೆ ಸಚಿವರು

ಉತ್ತರಿಸುವ ದಿನಾಂಕ : 17.03.2021

ಕ್ರ.ಸಂ.	ಪ್ರಶ್ನೆ	ಉತ್ತರ
ಅ.	ಉತ್ತರ ಕನ್ನಡ ಜಿಲ್ಲೆಯ ಕಾರವಾರ ತಾಲ್ಲೂಕಿನಲ್ಲಿ ವಾಯವ್ಯ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ವಿಭಾಗೀಯ ಕಛೇರಿಯನ್ನು ಮಂಜೂರು ಮಾಡಲು ಪ್ರಸ್ತಾವನೆ ಸಲ್ಲಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಕಾರವಾರ ಮತಕ್ಷೇತ್ರದ ಮಾನ್ಯ ಶಾಸಕರು ಕಾರವಾರದಲ್ಲಿ ವಿಭಾಗೀಯ ಕಛೇರಿ ಸ್ಥಾಪಿಸುವ ಕುರಿತು ಕೋರಿಕೆ ಸಲ್ಲಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ಮುಂದುವರೆದು, ಶಿರಸಿಯಲ್ಲಿ ವಿಭಾಗೀಯ ಕಚೇರಿ ಹಾಗೂ ವಿಭಾಗೀಯ ಕಾರ್ಯಾಗಾರದೊಂದಿಗೆ 1967ರಿಂದ ಉತ್ತರ ಕನ್ನಡ ವಿಭಾಗವು ಕಾರ್ಯಾರಂಭದಲ್ಲಿದೆ. ಪ್ರಸ್ತುತ ವಿಭಾಗದ ವ್ಯಾಪ್ತಿಯಲ್ಲಿ ಒಟ್ಟು ಆರು (6) ಘಟಕಗಳು ಹಾಗೂ ಒಂದು ವಿಭಾಗೀಯ ಕಾರ್ಯಾಗಾರ ಕಾರ್ಯ ನಿರ್ವಹಿಸುತ್ತಿರುತ್ತದೆ. ಶಿರಸಿಯಿಂದ ಭಟ್ಕಳ ಘಟಕವು 130 ಕಿ.ಮೀ., ಕುಮಟಾ ಘಟಕವು 63 ಕಿ.ಮೀ, ಅಂಕೋಲಾ ಘಟಕವು 82 ಕಿ.ಮೀ, ಕಾರವಾರ ಘಟಕವು 121 ಕಿ.ಮೀ ಹಾಗೂ ಯಲ್ಲಾಪೂರ ಘಟಕವು 50 ಕಿ.ಮೀ ಅಂತರದಲ್ಲಿದ್ದು, ಶಿರಸಿ ಘಟಕವು ಕೇಂದ್ರಸ್ಥಾನ ಶಿರಸಿಯಲ್ಲಿರುತ್ತದೆ. ಶಿರಸಿಯಲ್ಲಿರುವ ವಿಭಾಗೀಯ ಕಚೇರಿಯು ವಿಭಾಗದ ಎಲ್ಲ ಘಟಕಗಳಿಂದ ಅನುಕೂಲಕರ ಅಂತರದಲ್ಲಿರುವುದರಿಂದ ಸುಗಮ ಹಾಗೂ ಉತ್ತಮ ರೀತಿಯ ಆಡಳಿತ ನಿರ್ವಹಣೆಗೆ ಅನುಕೂಲವಾಗಿದೆ. ಅಲ್ಲದೇ ಹುಬ್ಬಳ್ಳಿಯಲ್ಲಿರುವ ಕೇಂದ್ರ ಕಚೇರಿ ಹಾಗೂ ಪ್ರಾದೇಶಿಕ ಕಾರ್ಯಾಗಾರ ಕೂಡ 103 ಕಿ.ಮೀ ಅಂತರದಲ್ಲಿದೆ. ಇದರಿಂದಾಗಿ ವಿಭಾಗದ ಒಟ್ಟಾರೆ ಕಾರ್ಯನಿರ್ವಹಣೆಗೆ ವಿಭಾಗೀಯ ಕಚೇರಿಯು ಶಿರಸಿಯಲ್ಲಿರುವುದರಿಂದ ಬಹಳ ಅನುಕೂಲಕರವಾಗಿದೆ.
ಆ	ಬಂದಿದ್ದಲ್ಲಿ, ಪ್ರಸ್ತಾವನೆಯು ಯಾವ ಹಂತದಲ್ಲಿದೆ; ಯಾವಾಗ ವಿಭಾಗೀಯ ಕಛೇರಿಯನ್ನು ಮಂಜೂರು ಮಾಡಲಾಗುವುದು? (ಸಂಪೂರ್ಣ ವಿವರ ನೀಡುವುದು)	ಶಿರಸಿಯಲ್ಲಿರುವ ವಿಭಾಗೀಯ ಕಚೇರಿಯನ್ನು ಕಾರವಾರಕ್ಕೆ ಸ್ಥಳಾಂತರಿಸಬೇಕಿದ್ದಲ್ಲಿ ಅಥವಾ ಹೆಚ್ಚುವರಿ ವಿಭಾಗೀಯ ಕಚೇರಿಯನ್ನು ಸ್ಥಾಪಿಸಬೇಕಿದ್ದಲ್ಲಿ ವಿಭಾಗೀಯ ಕಾರ್ಯಾಗಾರವನ್ನೂ ಸ್ಥಳಾಂತರಿಸಬೇಕಾಗುತ್ತದೆ ಅಥವಾ ಹೆಚ್ಚುವರಿಯಾಗಿ ಸ್ಥಾಪಿಸಬೇಕಿರುತ್ತದೆ. ಈಗಾಗಲೇ ನಷ್ಟದಲ್ಲಿರುವ ಸಂಸ್ಥೆಗೆ ಹೆಚ್ಚುವರಿ ವಿಭಾಗೀಯ ಕಚೇರಿ ಮತ್ತು ವಿಭಾಗೀಯ ಕಾರ್ಯಾಗಾರದ ಸ್ಥಾಪನೆಯ ಆರ್ಥಿಕ ಹೊರೆಯನ್ನು ನಿಭಾಯಿಸುವುದು ಕಷ್ಟಕರವಾಗಿರುತ್ತದೆ. ಆದ್ದರಿಂದ, ಸಂಸ್ಥೆಯ ಹಿತದೃಷ್ಟಿಯಿಂದ ಕಾರವಾರದಲ್ಲಿ ಹೆಚ್ಚುವರಿ ವಿಭಾಗೀಯ ಕಚೇರಿ ಹಾಗೂ ವಿಭಾಗೀಯ ಕಾರ್ಯಾಗಾರವನ್ನು ಸ್ಥಾಪಿಸುವುದು ಸೂಕ್ತವಾಗಿರುವುದಿಲ್ಲ.

ಸಂಖ್ಯೆ: ಟಿಡಿ 95 ಟಿಸಿಕ್ಯೂ 2021

(ಲಕ್ಷ್ಮಣ ಸಂಗಪ್ಪ ಸವದಿ)
ಉಪ ಮುಖ್ಯಮಂತ್ರಿಗಳು ಹಾಗೂ
ಸಾರಿಗೆ ಸಚಿವರು

05

ಕರ್ನಾಟಕ ವಿಧಾನಸಭೆ

ಸದಸ್ಯರ ಹೆಸರು	:	ಶ್ರೀ ಸೋಮಲಿಂಗಪ್ಪ ಎಂ.ಎಸ್.
ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ:	:	2712
ಉತ್ತರಿಸಬೇಕಾದ ಸಚಿವರು	:	ಮಾನ್ಯ ಕೃಷಿ ಸಚಿವರು
ಉತ್ತರಿಸಬೇಕಾದ ದಿನಾಂಕ	:	17-03-2021

ಕ್ರ.ಸಂ	ಪ್ರಶ್ನೆ	ಉತ್ತರ
ಅ	ಬಳ್ಳಾರಿ ಜಿಲ್ಲೆಯ ಹಗರಿ ಕೃಷಿ ಸಂಶೋಧನಾ ಕೇಂದ್ರದ ಆವರಣದಲ್ಲಿ ನೂತನ ಕೃಷಿ ಮಹಾವಿದ್ಯಾಲಯವನ್ನು ಸ್ಥಾಪಿಸುವುದಕ್ಕೆ ಸರ್ಕಾರವು ಯಾವ ಕ್ರಮ ಕೈಗೊಂಡಿದೆ ;	ಬಳ್ಳಾರಿಯಲ್ಲಿ ಕೃಷಿ ಕಾಲೇಜನ್ನು ಸ್ಥಾಪಿಸುವ ಕುರಿತು ಕುಲಪತಿಗಳು, ರಾಯಚೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ಇವರು ಇಲಾಖೆಯಿಂದ ರಚಿಸಲಾದ ತಂಡದ ಪ್ರತಿನಿಧಿಗಳೊಂದಿಗೆ ಸಮಾಲೋಚಿಸಿ, ಸಿದ್ಧಪಡಿಸಿದ ಅಂತಿಮ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿರುತ್ತಾರೆ. ದಿ: 18.02.2020ರಂದು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಅಭಿವೃದ್ಧಿ ಆಯುಕ್ತರ ಅಧ್ಯಕ್ಷತೆಯಲ್ಲಿ ನಡೆದ ಪರಿಣಿತ ಸಮಿತಿ ಸಭೆಯಲ್ಲಿ ಪ್ರಸ್ತುತ ಇರುವ ಮೂಲಸೌಕರ್ಯ ಹಾಗೂ ಸಿಬ್ಬಂದಿಗಳಲ್ಲಿಯೇ ಹೊಸ ಕಾಲೇಜುಗಳನ್ನು ಪ್ರಾರಂಭಿಸಬಹುದಾಗಿದ್ದು, ಮಾನ್ಯ ಕೃಷಿ ಸಚಿವರ ಅನುಮೋದನೆಯೊಂದಿಗೆ ಪರಿಣಿತ ಸಮಿತಿ ಸಭೆಯಲ್ಲಿ ಮಂಡಿಸಬೇಕೆಂದು ನಿರ್ಣಯಿಸಲಾಗಿರುತ್ತದೆ. ಅದರಂತೆ, ಕೃಷಿ ವಿಶ್ವವಿದ್ಯಾಲಯ, ರಾಯಚೂರು ಇವರು ಮತ್ತೊಮ್ಮೆ ಶೈಕ್ಷಣಿಕ ವರ್ಷ 2021-22ನೇ ಸಾಲಿಗೆ ನೂತನ ಕೃಷಿ ಕಾಲೇಜನ್ನು ಸ್ಥಾಪಿಸಲು ಪ್ರಸ್ತಾವನೆಯನ್ನು ಸಲ್ಲಿಸಿದ್ದು, ಆರ್ಥಿಕ ಇಲಾಖೆಯು ಸದರಿ ಪ್ರಸ್ತಾವನೆಗೆ ಪ್ರಸ್ತುತ ಯಾವುದೇ ಹೊಸ ಕಾಲೇಜನ್ನು ಪ್ರಾರಂಭಿಸಲು ಅನುಮತಿ ನೀಡಬಾರದೆಂದು, ಹಾಲಿ ಇರುವ ಕಾಲೇಜುಗಳನ್ನೇ ಬಲಪಡಿಸಬೇಕೆಂಬ
ಆ	ಹಗರಿಯಲ್ಲಿ ಕೃಷಿ ಮಹಾವಿದ್ಯಾಲಯ ಸ್ಥಾಪನೆ ಮಾಡಲು ವಿಳಂಬವಾಗುತ್ತಿರುವುದು ಸರಕಾರದ ಗಮನಕ್ಕೆ ಬಂದಿದೆಯೇ;	
ಇ	ಪ್ರಸಕ್ತ ಸಾಲಿನಲ್ಲಿ ಕೃಷಿ ಮಹಾ ವಿದ್ಯಾಲಯವನ್ನು ಸ್ಥಾಪನೆ ಮಾಡಲು ಸರ್ಕಾರವು ಕೈಗೊಂಡಿರುವ ಕ್ರಮಗಳೇನು ? (ಪೂರ್ಣ ವಿವರ ಒದಗಿಸುವುದು)	

		ತೀರ್ಮಾನ ಕೈಗೊಳ್ಳಲಾಗಿರುತ್ತದೆ, ಸದ್ಯಕ್ಕೆ ಪ್ರಸ್ತಾವನೆಯನ್ನು ಮುಂದೂಡಲು ತಿಳಿಸಿರುತ್ತದೆ. University of Agricultural Sciences, Raichur has
		submitted a report to the Government to establish a new Agriculture College at Hagari by consulting the Committee which has constituted by Department of Agriculture. Expert Committee meeting was held on 18.12.2019 under the chairpersonship of Additional Chief Secretary and Development Commissioner, the Committee has opined that a new college can be established with no extra faculty and budget for infrastructure, the matter must brought to Committee by recommendation of Hon'ble Agriculture Minister. Accordingly, University of Agricultural Sciences, Raichur has once again submitted a proposal to Government to establish a new College for the academic year 2021-22. Finance Department has examined and opined that establishing a new college is not permitted, but to strengthen the existing colleges and currently to postpone the said proposal.

ಸಂಖ್ಯೆ: AGRI-AUR/10/2021

(ಬಿ.ಸಿ.ಪಾಟೀಲ್)
ಕೃಷಿ ಸಚಿವರು

06

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 2563
ಸದಸ್ಯರ ಹೆಸರು : ಶ್ರೀ ಮಾಡಾಳ್ ವಿರೂಪಾಕ್ಷಪ್ಪ ಕೆ.
ಉತ್ತರಿಸುವ ಸಚಿವರು : ಉಪ ಮುಖ್ಯಮಂತ್ರಿಗಳು ಹಾಗೂ ಸಾರಿಗೆ ಸಚಿವರು
ಉತ್ತರಿಸುವ ದಿನಾಂಕ : 17.03.2021

ಕ್ರ.ಸಂ.	ಪ್ರಶ್ನೆ	ಉತ್ತರ
ಅ.	ಚನ್ನಗಿರಿ ಪಟ್ಟಣದಲ್ಲಿ ಕೆ.ಎಸ್.ಆರ್.ಟಿ.ಸಿ. ಡಿಪೋ ಪ್ರಾರಂಭಿಸಲು ನಂಜುಂಡಪ್ಪ ವರದಿಯನ್ವಯ ಕಾಮಗಾರಿಯು ಮಂಜೂರಾಗಿದ್ದು ಟೆಂಡರ್ ಹಂತದಲ್ಲಿ ಇದ್ದಂತಹ ಈ ಕಾಮಗಾರಿಯನ್ನು ಸ್ಥಗಿತಗೊಳಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಕಾರಣವೇನು; (ಮಾಹಿತಿ ನೀಡುವುದು)	2020-21ನೇ ಸಾಲಿನ ವಿಶೇಷ ಅಭಿವೃದ್ಧಿ ಯೋಜನೆ (ಎಸ್.ಡಿ.ಪಿ.) ಅಡಿಯಲ್ಲಿ ಚನ್ನಗಿರಿ ಪಟ್ಟಣದಲ್ಲಿ ಕ.ರಾ.ರ.ಸಾ.ನಿಗಮದ ಬಸ್ ಘಟಕ ನಿರ್ಮಾಣ ಕಾಮಗಾರಿಯ ಕ್ರಿಯಾ ಯೋಜನೆಯಲ್ಲಿ ಪ್ರಸ್ತಾಪಿಸಿ, ಟೆಂಡರ್ ಆಹ್ವಾನಿಸಲಾಗಿತ್ತು. ಆದರೆ, ಈ ಮಧ್ಯೆ ಕೋವಿಡ್-19 ವೈರಸ್‌ನ ಸಾಂಕ್ರಾಮಿಕ ರೋಗ ಹರಡುವಿಕೆಯ ಸಂಬಂಧ ದೇಶವ್ಯಾಪಿ ಲಾಕ್‌ಡೌನ್ ಜಾರಿಯಾದ ಹಿನ್ನೆಲೆಯಲ್ಲಿ, ಸರ್ಕಾರವು 2020-21ನೇ ಸಾಲಿನ ವಿಶೇಷ ಅಭಿವೃದ್ಧಿ ಯೋಜನೆಯಡಿ (ಎಸ್.ಡಿ.ಪಿ.) ಒದಗಿಸಲಾಗಿದ್ದ ಅನುದಾನವನ್ನೊಳಗೊಂಡಂತೆ ವಿವಿಧ ಯೋಜನೆಗಳಡಿ (ಎಸ್.ಸಿ.ಪಿ./ಟಿ.ಎಸ್.ಪಿ. ಕಾರ್ಯಕ್ರಮವನ್ನು ಹೊರತುಪಡಿಸಿ) ಆಯವ್ಯಯದಲ್ಲಿ ಒದಗಿಸಲಾಗಿದ್ದ ಅನುದಾನವನ್ನು ಸಂಸ್ಥೆಗಳ ವೇತನ ವೆಚ್ಚಕ್ಕಾಗಿ ಮಾತ್ರ ಬಳಸಿಕೊಳ್ಳಲು ಬಿಡುಗಡೆ ಮಾಡಲಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಅನುದಾನದ ಅಲಭ್ಯತೆಯ ಕಾರಣ ಸದರಿ ಟೆಂಡರ್ ಪ್ರಕ್ರಿಯೆಯನ್ನು ರದ್ದುಗೊಳಿಸಲಾಗಿರುತ್ತದೆ.
ಆ	ಕೆ.ಎಸ್.ಆರ್.ಟಿ.ಸಿ. ಡಿಪೋ ಪ್ರಾರಂಭಿಸಲು ಈಗಾಗಲೇ ಕೋಟ್ಯಾಂತರ ರೂಪಾಯಿ ಬೆಲೆ ಬಾಳುವ ಕಂದಾಯ ಇಲಾಖೆಗೆ ಸೇರಿದ ಜಾಗವನ್ನು ಸಾರಿಗೆ ಇಲಾಖೆಗೆ ನೀಡಿದ್ದು, ಡಿಪೋ ಕಾಮಗಾರಿಯು ಇನ್ನೂ ಪ್ರಾರಂಭವಾಗದೇ ಇರುವುದರಿಂದ ಅಕ್ಕಪಕ್ಕದ ಜಮೀನಿನವರು ಒತ್ತುವರಿ ಮಾಡಿ ಅಕ್ರಮ ಚಟುವಟಿಕೆ ನಡೆಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಪ್ರಸ್ತುತ ಬಸ್ ಘಟಕ ನಿರ್ಮಾಣಕ್ಕೆ ನಿಗದಿಪಡಿಸಿರುವ ಜಮೀನಿನ ಅಕ್ಕಪಕ್ಕ ಇತರೆ ಕೃಷಿ ಸಂಬಂಧಿತ ಚಟುವಟಿಕೆಗಳು ಹಾಗೂ ಶಾಲಾ ಕಟ್ಟಡ ಇರುತ್ತದೆ. ಅಕ್ಕಪಕ್ಕದ ಜಮೀನಿನವರು ಒತ್ತುವರಿ ಅಥವಾ ಅಕ್ರಮ ಚಟುವಟಿಕೆ ನಡೆಸದಂತೆ ನಿಗಮದಿಂದ ನಿಗಾ ವಹಿಸಲಾಗಿರುತ್ತದೆ.
ಇ	ಹಾಗಿದ್ದಲ್ಲಿ, ಚನ್ನಗಿರಿ ಪಟ್ಟಣದಲ್ಲಿ ಕೆ.ಎಸ್.ಆರ್.ಟಿ.ಸಿ. ಡಿಪೋ ಕಾಮಗಾರಿಯನ್ನು ಯಾವಾಗ ಪ್ರಾರಂಭಿಸಲಾಗುವುದು?	ಪ್ರಸ್ತುತ ಕೋವಿಡ್-19 ವಿಷಮ ಪರಿಸ್ಥಿತಿಯಿಂದಾಗಿ ಕ.ರಾ.ರ.ಸಾ.ನಿಗಮವು ಆರ್ಥಿಕ ಸಂಕಷ್ಟದಲ್ಲಿದ್ದು, ಹೊಸ ಕಾಮಗಾರಿಗಳನ್ನು ಕೈಗೊಳ್ಳಲು ಸಾಧ್ಯವಾಗುತ್ತಿರುವುದಿಲ್ಲ. 2021-22ನೇ ಸಾಲಿನಲ್ಲಿ ಆಯವ್ಯಯದಲ್ಲಿ ವಿಶೇಷ ಅಭಿವೃದ್ಧಿ ಯೋಜನೆಯಡಿ (ಎಸ್.ಡಿ.ಪಿ.) ಬಿಡುಗಡೆಯಾಗುವ ಅನುದಾನದಲ್ಲಿ ಸದರಿ ಕಾಮಗಾರಿಯನ್ನು ಕೈಗೊಳ್ಳುವ ಬಗ್ಗೆ ಪರಿಶೀಲಿಸಲಾಗುವುದು.

ಸಂಖ್ಯೆ: ಟಿಡಿ 96 ಟಿಸಿಕ್ಯೂ 2021

(ಲಕ್ಷ್ಮಣ ಸಂಗಪ್ಪ ಸವದಿ)
ಉಪ ಮುಖ್ಯ ಮಂತ್ರಿಗಳು ಹಾಗೂ
ಸಾರಿಗೆ ಸಚಿವರು

07

ಕರ್ನಾಟಕ ವಿಧಾನ ಸಭೆ

1.	ಚುಕ್ಕೆ ಗುರುತಿನ ಪ್ರಶ್ನೆ	: 2529
2.	ಸದಸ್ಯರ ಹೆಸರು	: ಶ್ರೀ ಬಸನಗೌಡ ಆರ್ ಪಾಟೀಲ್ (ಯತ್ನಾಳ್)(ವಿಜಯಪುರ ನಗರ)
3.	ಉತ್ತರಿಸಬೇಕಾದ ದಿನಾಂಕ	:17.03.2021
4.	ಉತ್ತರಿಸುವ ಸಚಿವರು	: ಮಾನ್ಯ ಮೂಲಸೌಲಭ್ಯ ಅಭಿವೃದ್ಧಿ, ಹಜ್ ಮತ್ತು ವಕ್ಫ್ ಸಚಿವರು.

ಕ್ರ ಸಂ	ಪ್ರಶ್ನೆ	ಉತ್ತರ
ಅ)	ಶಿವಮೊಗ್ಗ ಮತ್ತು ವಿಜಯಪುರ ವಿಮಾನ ನಿರ್ಮಾಣಕ್ಕೆ ಮೀಸಲಿಟ್ಟಿರುವ ಅನುದಾನ ಎಷ್ಟು;	ಶಿವಮೊಗ್ಗ ವಿಮಾನ ನಿಲ್ದಾಣದ ಅಭಿವೃದ್ಧಿಗಾಗಿ ರೂ.384 ಕೋಟಿ ಮೊತ್ತಕ್ಕೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ ಹಾಗೂ ವಿಜಯಪುರ ವಿಮಾನ ನಿಲ್ದಾಣದ ಅಭಿವೃದ್ಧಿಗಾಗಿ ರೂ 220 ಕೋಟಿ ಮೊತ್ತಕ್ಕೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ.
ಆ)	ಸದರಿ ವಿಮಾನ ನಿಲ್ದಾಣಗಳ ಕಾಮಗಾರಿ ಯಾವ ಹಂತದಲ್ಲಿದೆ; ಯಾವಾಗ ಪೂರ್ಣಗೊಳ್ಳಲಿದೆ; ಕಾಮಗಾರಿ ಪೂರ್ಣಗೊಳ್ಳಲು ಹಾಕಿಕೊಂಡಿರುವ ಕಾಲಮಿತಿ ಎಷ್ಟು;	**ಶಿವಮೊಗ್ಗ ವಿಮಾನ ನಿಲ್ದಾಣ:** ಸದರಿ ವಿಮಾನ ನಿಲ್ದಾಣದ ಕಾಮಗಾರಿಯನ್ನು ಜಿಲ್ಲಾಧಿಕಾರಿ, ಶಿವಮೊಗ್ಗ ಇವರ ಮೇಲ್ವಿಚಾರಣೆಯಲ್ಲಿ ಲೋಕೋಪಯೋಗಿ ಇಲಾಖೆ ವತಿಯಿಂದ ಕೈಗೊಳ್ಳಲಾಗುತ್ತಿದೆ. ಪ್ರಸ್ತುತ ಪ್ಯಾಕೇಜ್-1ರ ಯೋಜನೆಯನ್ನು ಪ್ರಾರಂಭಿಸಲಾಗಿದೆ. ಗುತ್ತಿಗೆ ಕರಾರಿನಂತೆ ಕಾಮಗಾರಿಯನ್ನು ಡಿಸೆಂಬರ್-2021 ರ ವೇಳೆಗೆ ಪೂರ್ಣಗೊಳಿಸಲು ಕ್ರಮವಹಿಸಲಾಗುವುದು. **ವಿಜಯಪುರ ವಿಮಾನ ನಿಲ್ದಾಣ:** ಸದರಿ ವಿಮಾನ ನಿಲ್ದಾಣದ ಕಾಮಗಾರಿಯನ್ನು ಲೋಕೋಪಯೋಗಿ ಇಲಾಖೆ ವತಿಯಿಂದ ಕೈಗೊಳ್ಳಲಾಗುತ್ತಿದೆ. ಪ್ರಸ್ತುತ ಫೇಸ್-1 ರ ಯೋಜನೆಯನ್ನು ಪ್ರಾರಂಭಿಸಲಾಗಿದೆ. ಗುತ್ತಿಗೆ ಕರಾರಿನಂತೆ ಕಾಮಗಾರಿಯನ್ನು ಡಿಸೆಂಬರ್-2021ರ ವೇಳೆಗೆ ಪೂರ್ಣಗೊಳಿಸಲು ಕ್ರಮವಹಿಸಲಾಗುವುದು.
ಇ)	ಟೆಂಡರ್‌ನಲ್ಲಿ ಭಾಗವಹಿಸಿದ್ದ ಸಂಸ್ಥೆಗಳಾವುವು; (ವಿವರ ನೀಡುವುದು)	**ಶಿವಮೊಗ್ಗ ವಿಮಾನ ನಿಲ್ದಾಣದ** ಕಾಮಗಾರಿಗಳನ್ನು ಜಿಲ್ಲಾಧಿಕಾರಿ, ಶಿವಮೊಗ್ಗ ಇವರ ಮೇಲ್ವಿಚಾರಣೆಯಲ್ಲಿ ಲೋಕೋಪಯೋಗಿ ಇಲಾಖೆ ವತಿಯಿಂದ ಕೈಗೊಳ್ಳಲಾಗುತ್ತಿದ್ದು, ಈ ನಿಟ್ಟಿನಲ್ಲಿ ಪ್ಯಾಕೇಜ್-1ರ ಯೋಜನೆಗೆ ಈ ಕೆಳಕಂಡಂತೆ ಮೂರು ಗುತ್ತಿಗೆದಾರರು ಭಾಗವಹಿಸಿರುತ್ತಾರೆ: 1. **ಶ್ರೀ ಇಬ್ರಾಹಿಂ ಶರೀಫ್, ತೀರ್ಥಹಳ್ಳಿ – ಅರ್ಹ ಗುತ್ತಿಗೆದಾರರು.** 2. ಪ್ರೇಮ ಚಂದ್ರ ರೆಡ್ಡಿ (ಮೆ.ಎನ್.ಸಿ.ಸಿ ಲಿಮಿಟೆಡ್) ಅನರ್ಹ ಗುತ್ತಿಗೆದಾರರು. 3. ಎ.ಐ.ಡಿ ಇನ್‌ಫ್ರಾಸ್ಟ್ರಕ್ಚರ್ ಪ್ರೈವೇಟ್ ಲಿಮಿಟೆಡ್ –ಪೂರ್ಣ ಇಎಂಡಿ ಸಲ್ಲಿಸದ ಕಾರಣ ತಾಂತ್ರಿಕ ಬಿಡ್ ತೆರೆದಿರುವುದಿಲ್ಲ. **ವಿಜಯಪುರ ವಿಮಾನ ನಿಲ್ದಾಣ** ಕಾಮಗಾರಿಯನ್ನು ಲೋಕೋಪಯೋಗಿ ಇಲಾಖೆ ವತಿಯಿಂದ ಕೈಗೊಳ್ಳಲಾಗುತ್ತಿದ್ದು, ಯೋಜನೆಯ ಫೇಸ್-1ರ ಕಾಮಗಾರಿಗಳಿಗಾಗಿ ಈ ಕೆಳಕಂಡಂತೆ ಒಟ್ಟು ಎಂಟು ಗುತ್ತಿಗೆದಾರರು ಭಾಗವಹಿಸಿರುತ್ತಾರೆ: 1. ಮೆ:ಆರ್.ಕೆ.ಇನ್ ಪ್ರಾಕಾರ್ಪ್ ಪ್ರೈ.ಲಿ.ಹೈದ್ರಾಬಾದ್ -ಅನರ್ಹ 2. ಮೆ:ಎಂ.ಎಸ್.ನಾಯಕ್ ಅಂಡ್ ಸನ್ಸ್, ಹುಬ್ಬಳ್ಳಿ-ಅನರ್ಹ 3. ಮೆ:ಪಿ.ಆರ್.ಎನ್.ಇನ್‌ಫ್ರಾಟೆಕ್ ಹುಬ್ಬಳ್ಳಿ – ಅನರ್ಹ 4. ಮೆ:ಆರ್.ಎಂ.ಎನ್. ಇನ್‌ಫ್ರಾಸ್ಟ್ರಕ್ಚರ್ ಲಿ, ಹೈದ್ರಾರಾಬಾದ್ – ಅನರ್ಹ

		5. ಮೆ:ಶ್ರೀಎಸ್.ಎಂ.ಔರಾಡೆ ಪ್ರೈ.ಲಿ ಮಂಗಲ್ ವೇಢಾ, ಶೋಲಾಪುರ -ಅನರ್ಹ 6. ಮೆ:ಶ್ರೀಎಸ್.ಎಸ್.ಆಲೂರ್ ಕನ್ಸಟ್ರಕ್ಷನ್ಸ್ ಕಂ ವಿಜಯಪುರ - ಅರ್ಹ 7. ಶ್ರೀಉದಯಶಿವಕುಮಾರ್, ದಾವಣಗೆರೆ-ಅರ್ಹ 8. ಮೆ:ಶಾರದ ಕನ್ಸಟ್ರಕ್ಷನ್ಸ್ ಅಂಡ್ ಕಾರ್ಪೋರೇಷನ್ ಪ್ರೈಲಿ., ಬೀದರ್ – ಅನರ್ಹ
ಈ)	ವಿಮಾನ ನಿಲ್ದಾಣ ಕಾಮಗಾರಿಯ ಗುತ್ತಿಗೆಯನ್ನು ಯಾವ ಕಂಪನಿಗೆ ನೀಡಲಾಗಿದೆ? (ಪೂರ್ಣ ಮಾಹಿತಿ ನೀಡುವುದು)	ಶಿವಮೊಗ್ಗ ವಿಮಾನ ನಿಲ್ದಾಣ ನಿರ್ಮಾಣದ ಪ್ಯಾಕೇಜ್-1ರ ಯೋಜನೆಗೆ ಲೋಕೋಪಯೋಗಿ ಇಲಾಖೆಯಿಂದ **ಶ್ರೀ ಇಬ್ರಾಹಿಂ ಶರೀಪ್, ತೀರ್ಥಹಳ್ಳಿ,** ಇವರಿಗೆ ಗುತ್ತಿಗೆ ಇಡಲಾದ ಮೊತ್ತ ರೂ.116.17 ಕೋಟಿ+ಜಿ.ಎಸ್.ಟಿ ಮೊತ್ತಕ್ಕೆ ಎದುರಾಗಿ ರೂ.133.02 ಕೋಟಿ+ಜಿ.ಎಸ್.ಟಿ ಮೊತ್ತಕ್ಕೆ ಗುತ್ತಿಗೆಯನ್ನು ನೀಡಲಾಗಿದೆ. ವಿಜಯಪುರ ವಿಮಾನ ನಿಲ್ದಾಣ ನಿರ್ಮಾಣದ ಫೇಸ್-1 ರ ಕಾಮಗಾರಿಯನ್ನು **ಶ್ರೀಎಸ್.ಎಸ್.ಆಲೂರ್ ಕನ್ಸಟ್ರಕ್ಷನ್.ಕಂ** ವಿಜಯಪುರ ಇವರಿಗೆ ಕಾಮಗಾರಿಗೆ ಗುತ್ತಿಗೆಗೆ ಇಡಲಾದ ಮೊತ್ತ ರೂ.76.16 ಕೋಟಿ+ಜಿ.ಎಸ್.ಟಿ ಕ್ಕೆ ಎದುರಾಗಿ ರೂ.85.00 ಕೋಟಿ +ಜಿ.ಎಸ್.ಟಿ ಮೊತ್ತಕ್ಕೆ ಗುತ್ತಿಗೆಯನ್ನು ನೀಡಲಾಗಿದೆ.

ಸಂಖ್ಯೆ:ಮೂಅಇ 36 ರಾಅವಿ 2021

(ಆನಂದ್ ಸಿಂಗ್)

ಮೂಲಸೌಲಭ್ಯ ಅಭಿವೃದ್ಧಿ, ಹಜ್ ಮತ್ತು
ವಕ್ಫ್ ಸಚಿವರು

(08)

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	:	2817
ಸದಸ್ಯರ ಹೆಸರು	:	ಶ್ರೀ ಗೂಳಿಹಟ್ಟಿ ಡಿ. ಶೇಖರ್ (ಹೊಸದುರ್ಗ)
ಉತ್ತರಿಸುವ ದಿನಾಂಕ	:	17-03-2021.
ಉತ್ತರಿಸುವವರು	:	ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು.

ಕ್ರಸಂ	ಪ್ರಶ್ನೆ	ಉತ್ತರ
(ಅ)	ರಾಜ್ಯದಲ್ಲಿ ನೇರ ನೇಮಕಾತಿಯಿಂದ ಹಾಗೂ ಪದೋನ್ನತಿಯಿಂದ ನೇಮಕಾತಿಯಾದ ಒಟ್ಟು ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳ ಸಂಖ್ಯೆ ಎಷ್ಟು;	ಪ್ರಸ್ತುತ ರಾಜ್ಯದಲ್ಲಿ ಪಂಚಾಯತಿ ಅಭಿವೃದ್ಧಿ ಅಧಿಕಾರಿ ವೃಂದದ ನೇರ ನೇಮಕಾತಿ ಕೋಟಾದಲ್ಲಿ 3717 ನೌಕರರು ಮತ್ತು ಮುಂಬಡ್ತಿ ಕೋಟಾದಲ್ಲಿ 1563 ನೌಕರರು ಸೇರಿದಂತೆ ಒಟ್ಟು 5280 ನೌಕರರು ಕರ್ತವ್ಯ ನಿರ್ವಹಿಸುತ್ತಿರುತ್ತಾರೆ.
(ಆ)	ಖಾಲಿಯಿರುವ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳ ಹುದ್ದೆಗಳು ಎಷ್ಟು;	ಖಾಲಿ ಇರುವ ಪಂಚಾಯತಿ ಅಭಿವೃದ್ಧಿ ಅಧಿಕಾರಿ ಹುದ್ದೆಗಳ ಸಂಖ್ಯೆ: 741
(ಇ)	ಪಂಚಾಯತಿ ಅಭಿವೃದ್ಧಿ ಅಧಿಕಾರಿ ಹುದ್ದೆಯನ್ನು ಗ್ರೇಡ್-2 ಹುದ್ದೆಯಾಗಿ ಮೇಲ್ದರ್ಜೆಗೇರಿಸಲು ಸರ್ಕಾರ ಕೈಗೊಂಡ ಕ್ರಮಗಳೇನು?	ಆರ್ಥಿಕ ಇಲಾಖೆಯ ಅಭಿಪ್ರಾಯದ ಮೇರೆಗೆ ಪಂಚಾಯತಿ ಅಭಿವೃದ್ಧಿ ಅಧಿಕಾರಿ ಹುದ್ದೆಯನ್ನು ಗ್ರೂಪ್ ಬಿ ಹುದ್ದೆಗೆ ಮೇಲ್ದರ್ಜೆಗೇರಿಸುವ ಪ್ರಸ್ತಾವನೆಯನ್ನು 6ನೇ ಕರ್ನಾಟಕ ರಾಜ್ಯ ವೇತನ ಆಯೋಗದ ಮುಂದೆ ಮಂಡಿಸಲಾಗಿತ್ತು. 6ನೇ ರಾಜ್ಯ ವೇತನ ಆಯೋಗವು ತನ್ನ ವರದಿಯ 2ನೇ ಸಂಪುಟವನ್ನು ಆರ್ಥಿಕ ಇಲಾಖೆಗೆ ಸಲ್ಲಿಸಿದ್ದು, ಗ್ರಾಮ ಪಂಚಾಯತಿಗಳ ಮೇಲ್ದರ್ಜೆಗೇರಿಸುವಿಕೆ ವಿಷಯವು ಸರ್ಕಾರದ ಹಂತದಲ್ಲಿ ಅದರ ಕಾರ್ಯನಿರ್ವಹಣೆಯ ಅಗತ್ಯತೆಗಳನ್ನು ಮತ್ತು ಇತರೆ ತತ್ಸಬಂಧ ಅಂಶಗಳನ್ನು ತೀರ್ಮಾನಿಸಬೇಕಾಗುತ್ತದೆ ಎಂದು ತಿಳಿಸಿರುತ್ತದೆ. ರಾಜ್ಯದ ಗ್ರಾಮ ಪಂಚಾಯತ್‌ಗಳ ಪಂಚಾಯತ್ ಅಭಿವೃದ್ಧಿ ಅಧಿಕಾರಿ ಹುದ್ದೆಯನ್ನು ಗ್ರೂಪ್ ಬಿ ಹುದ್ದೆಯನ್ನಾಗಿ ಮೇಲ್ದರ್ಜೆಗೇರಿಸುವ ಬಗ್ಗೆ ಆರ್ಥಿಕ ಇಲಾಖೆಗೆ ಪ್ರಸ್ತಾವನೆ ಸಲ್ಲಿಸಲಾಗಿದೆ.

ಸಂ. ಗ್ರಾಅಪ 128 ಗ್ರಾಪಂಅ 2021

(ಕೆ.ಎಸ್. ಈಶ್ವರಪ್ಪ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು.

ಕೆ.ಎಸ್. ಈಶ್ವರಪ್ಪ
ಗ್ರಾಮೀಣಾಭಿವೃದ್ಧಿ ಮತ್ತು
ಪಂಚಾಯತ್ ರಾಜ್ ಸಚಿವರು

ಶೇಲಮ್ಮರ್ಕ 7-C (09)
17-03-2021

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 2761

ಸದಸ್ಯರ ಹೆಸರು : ಶ್ರೀ ನಾಗನಗೌಡ ಕಂದ್‌ಕೂರ್

ಉತ್ತರಿಸಬೇಕಾದ ದಿನಾಂಕ: : 17.03.2021

ಉತ್ತರಿಸುವ ಸಚಿವರು : ಕೃಷಿ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ	2018-19ನೇ ಸಾಲಿನ ಆಯವ್ಯಯದಲ್ಲಿ ಯಾದಗಿರಿ ಜಿಲ್ಲೆಗೆ ಇಸ್ರೇಲ್ ಮಾದರಿಯ ಕೃಷಿ ಪದ್ಧತಿಯನ್ನು ಅಳವಡಿಸಿಕೊಳ್ಳಲು ರೂ.150.00 ಕೋಟಿ ಘೋಷಣೆ ಮಾಡಿರುವುದು ನಿಜವೇ;	ಹೌದು 2018-19ನೇ ಸಾಲಿನ ಆಯವ್ಯಯದಲ್ಲಿ ತೋಟಗಾರಿಕಾ ವಲಯಕ್ಕೆ ಇಸ್ರೇಲ್ ಮಾದರಿ ನೀರಾವರಿ ಕ್ರಮಗಳನ್ನು ಕಾರವಾರ, ತುಮಕೂರು, ಯಾದಗಿರಿ ಮತ್ತು ಹಾವೇರಿ ಜಿಲ್ಲೆಗಳಲ್ಲಿ ಅನುಷ್ಠಾನಗೊಳಿಸಲು ರೂ.150 ಕೋಟಿ ರೂಪಾಯಿಗಳನ್ನು ನಿಗದಿಪಡಿಸಲಾಗಿರುತ್ತದೆ. Yes. During 2018-19 Budget an amount of Rs.150 crores was allocated to horticulture Sector to implement Israel Model Irrigation activity in Karwar, Tumkuru, Yadagiri and Haveri Districts.
ಆ	ಹಾಗಿದ್ದಲ್ಲಿ, ಈವರೆಗೂ ಇಸ್ರೇಲ್ ಮಾದರಿಯ ಕೃಷಿ ಪದ್ಧತಿಯನ್ನು ಅಳವಡಿಸಿಕೊಳ್ಳದಿರಲು ಕಾರಣಗಳೇನು; (ಸಂಪೂರ್ಣ ಮಾಹಿತಿ ನೀಡುವುದು)	ರಾಜ್ಯದಲ್ಲಿನ ಕೃಷಿ ಮತ್ತು ತೋಟಗಾರಿಕೆ ವಲಯದಲ್ಲಿ ಇಸ್ರೇಲ್ ತಂತ್ರಜ್ಞಾನ ಆಧಾರಿತ ಕೃಷಿ ಪದ್ಧತಿಯನ್ನು ಜಾರಿಗೆ ತರುವ ನಿಟ್ಟಿನಲ್ಲಿ ಪೂರಕವಾದ ಸಾಧಕ-ಭಾದಕಗಳನ್ನು ಪರಿಶೀಲಿಸಿ ರೈತರಿಗೆ ಉಪಯುಕ್ತ ಸಲಹೆ ಮತ್ತು ಮಾರ್ಗದರ್ಶನಗಳ ಕಾರ್ಯಸೂಚಿಗಳನ್ನು ಅಂತಿಮಪಡಿಸಲು ರಚಿತವಾದ ಸಮಿತಿಯ ವರದಿಯ ಆಧಾರದ ಮೇರೆಗೆ ಇಸ್ರೇಲ್ ತಂತ್ರಜ್ಞಾನ ಆಧಾರಿತ ಸಮಗ್ರ ಬೇಸಾಯ ಮಿಷನ್ ಅನ್ನು

ಕ್ರ.ಸಂ	ಪ್ರಶ್ನೆ	ಉತ್ತರ
		ಸ್ಥಾಪಿಸಲಾಗಿದೆ. ಇಸ್ರೇಲ್ ತಂತ್ರಜ್ಞಾನ ಆಧಾರಿತ ಕೃಷಿ ಪದ್ಧತಿಯನ್ನು ಅನುಷ್ಠಾನಗೊಳಿಸಲು ಬಹಳಷ್ಟು ಪೂರ್ವ ಸಿದ್ಧತೆಯ ಅವಶ್ಯಕವಿರುತ್ತದೆ. ಈ ನಿಟ್ಟಿನಲ್ಲಿ ಸರ್ಕಾರದ ಅಪರ ಮುಖ್ಯಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತರ ಅಧ್ಯಕ್ಷತೆ ಹಾಗೂ ಸಂಬಂಧಪಟ್ಟ ಇಲಾಖೆಗಳ ಕಾರ್ಯದರ್ಶಿಗಳನ್ನು ಒಳಗೊಂಡ ರಾಜ್ಯ ಮಟ್ಟದ ಅಧಿಕಾರಯುಕ್ತ ಸಮಿತಿಯನ್ನು ರಚಿಸಲಾಗಿದೆ. ಈ ಸಮಿತಿಯು ಕಾಲಕಾಲಕ್ಕೆ ಸದರಿ ಮಿಷನ್ ಅನುಷ್ಠಾನಗೊಳಿಸುವ ಕಾರ್ಯ ಚಟುವಟಿಕೆಗಳಿಗೆ ಅಗತ್ಯವಾದ ಸಲಹೆ ಮತ್ತು ಸೂಚನೆಗಳನ್ನು ನೀಡುತ್ತದೆ. ಈ ಯೋಜನೆ ಅನುಷ್ಠಾನ ಕಾರ್ಯದಲ್ಲಿ ಸಾಮರ್ಥ್ಯಾಭಿವೃದ್ಧಿ ಮತ್ತು ಜ್ಞಾನ ವರ್ಗಾವಣೆ ಬಹುಮುಖ್ಯವಾದ ಅಂಶವಾಗಿದೆ. ಕೃಷಿ ವಿಶ್ವವಿದ್ಯಾನಿಲಯಗಳು ಮತ್ತು ತೋಟಗಾರಿಕೆ ವಿಶ್ವವಿದ್ಯಾನಿಲಯದ ಸೇವೆಯನ್ನು ಸದರಿ ಯೋಜನೆಯನ್ನು ಅನುಷ್ಠಾನಗೊಳಿಸಲು ಬಳಕೆ ಮಾಡಿಕೊಳ್ಳಲಾಗುತ್ತಿದೆ. ಈ ಹಿನ್ನೆಲೆಯಲ್ಲಿ ರಾಜ್ಯದಲ್ಲಿನ 4 ಕೃಷಿ ಮತ್ತು 1 ತೋಟಗಾರಿಕೆ ವಿಶ್ವವಿದ್ಯಾನಿಲಯಗಳ ಪಾತ್ರ ಅತ್ಯಗತ್ಯವಾಗಿದೆ. ಈಗಾಗಲೇ 5 ವಿಶ್ವವಿದ್ಯಾನಿಲಯಗಳ ಉಪಕುಲಪತಿಗಳೊಂದಿಗೆ ಹಲವು ಬಾರಿ ಯೋಜನೆಯ ಅನುಷ್ಠಾನದ ಕುರಿತು ವಿಸ್ತೃತ ಸಭೆಗಳನ್ನು ನಡೆಸಲಾಗಿದೆ. ಐದು ವಿಶ್ವವಿದ್ಯಾನಿಲಯಗಳ ಉಪಕುಲಪತಿಗಳನ್ನು ಒಳಗೊಂಡ ಸದಸ್ಯರ ಉಪಸಮಿತಿಗಳನ್ನು ರಚಿಸಲಾಗಿದೆ. ಜೊತೆಗೆ ಯೋಜನೆಯನ್ನು ಜಾರಿಗೊಳಿಸಲು ಬೇಕಾದ ಪೂರ್ವ ಸಿದ್ಧತೆ ಮತ್ತು ಇತರೆ ಚಟುವಟಿಕೆಗಳಿಗಾಗಿ ವಿಶ್ವವಿದ್ಯಾನಿಲಯಗಳು

ಕ್ರ.ಸಂ	ಪ್ರಶ್ನೆ	ಉತ್ತರ
		ಮತ್ತು ಇಲಾಖೆಗಳಿಗೆ ಜವಾಬ್ದಾರಿಯನ್ನು ಈ ಕೆಳಕಂಡಂತೆ ನೀಡಲಾಗಿರುತ್ತದೆ. • ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯಕ್ಕೆ ಪ್ರಾತ್ಯಕ್ಷಿಕೆ ತಾಕುಗಳ ಸ್ಥಾಪನೆ • ಧಾರವಾಡ ಕೃಷಿ ವಿಶ್ವವಿದ್ಯಾನಿಲಯಕ್ಕೆ ರೈತರಿಗೆ ಅರಿವು ಮತ್ತು ತೋಟಗಾರಿಕಾ ಪದ್ಧತಿಗಳ ಕೈಪಿಡಿ ಸಿದ್ದಪಡಿಸುವುದು • ರಾಯಚೂರು ಕೃಷಿ ವಿಶ್ವವಿದ್ಯಾನಿಲಯಕ್ಕೆ ಜಾಗೃತಿ/ ಅರಿವು ಮೂಡಿಸಲು ವಿಷಯ ಸೃಜನೆ ಕುರಿತು • ಶಿವಮೊಗ್ಗ ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾನಿಲಯಕ್ಕೆ ಕೃಷಿ ಮತ್ತು ತೋಟಗಾರಿಕೆ ಪದವೀಧರರಿಗೆ ಒಂದು ವರ್ಷದ ಡಿಪ್ಲೋಮೊ ವಿಷಯ ಸಿದ್ದಪಡಿಸುವುದು • ಬಾಗಲಕೋಟೆ, ತೊಟಗಾರಿಕೆ ವಿಶ್ವವಿದ್ಯಾನಿಲಯಕ್ಕೆ ಉತ್ತಮ ಕೃಷಿ ಮತ್ತು ತೋಟಗಾರಿಕೆ ಪದ್ಧತಿಗಳ ಮಾಹಿತಿ ಕ್ರೋಢೀಕರಿಸುವ ಬಗ್ಗೆ ವರದಿ ನೀಡುವುದು. ಈಗಾಗಲೇ ಸದರಿ ವಿಶ್ವವಿದ್ಯಾನಿಲಯಗಳು ಕರಡು ವರದಿಗಳನ್ನು ಸಲ್ಲಿಸಲಾಗಿದ್ದು, ಸದರಿ ವರದಿಗಳನ್ನು ಪರಿಶೀಲಿಸಿ ಮುಂದಿನ ಕ್ರಮಕ್ಕೆ ಆದ್ಯತೆ ನೀಡಲಾಗುತ್ತಿದೆ. ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಜನವರಿ 10, 2020ರಂದು ಜಿಕೆವಿಕೆ, ಬೆಂಗಳೂರಿನಲ್ಲಿ ರಾಜ್ಯಮಟ್ಟದ ಒಂದು ದಿನದ ಕಾರ್ಯಾಗಾರವನ್ನು ಏರ್ಪಡಿಸಿದ್ದು, ಈ ವೇಳೆ ಯೋಜನೆ ಅನುಷ್ಠಾನದ ಅಂತಿಮ ಹಂತದ ಸಿದ್ಧತೆಗಳ ಕುರಿತು ಸುದೀರ್ಘವಾಗಿ ಚರ್ಚೆ ನಡೆಸಲಾಯಿತು. ಇಸ್ರೇಲ್ ತಂತ್ರಜ್ಞಾನ ಆಧಾರಿತ ಸಮಗ್ರ ಕೃಷಿ ಪದ್ಧತಿಗಳನ್ನು ಅಳವಡಿಸಿಕೊಳ್ಳಲು ಅನುಸರಿಸಬೇಕಾದ ಉಪಯುಕ್ತವಾಗುವ

ಕ್ರ.ಸಂ	ಪ್ರಶ್ನೆ	ಉತ್ತರ
		ಮಾದರಿಗಳ ಬಗ್ಗೆ ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದಲ್ಲಿ ನಡೆದ ಕೃಷಿ ಮೇಳ–2019ರಲ್ಲಿ ವಿಶೇಷವಾದ ಪ್ರಾತ್ಯಕ್ಷಿಕೆ ತಾಕುಗಳನ್ನು ಸ್ಥಾಪಿಸಿ ರೈತರಿಗೆ ಅರಿವು ಮೂಡಿಸುವ ಕಾರ್ಯಕ್ರಮ ನಡೆಸಲಾಗಿದೆ. ಈ ಮೇಳದಲ್ಲಿ ಲಕ್ಷಾಂತರ ರೈತರು ಭಾಗವಹಿಸಿ ನೂತನ ಕೃಷಿ ಪದ್ಧತಿಗಳ ಬಗ್ಗೆ ಶಿಕ್ಷಣ ಪಡೆದಿರುತ್ತಾರೆ. ಆದಾಗ್ಯೂ ಆಯವ್ಯಯದಲ್ಲಿ ಅನುದಾನ ಹಂಚಿಕೆ ಮಾಡದಿರುವ ಪ್ರಯುಕ್ತ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ಸಾಧ್ಯವಾಗಿರುವುದಿಲ್ಲ. To preview the pros and cons of implementation of Israel Technology and to give suitable suggestions to farmers and to finalize implementation guidelines, Israel Technology Based Integrated Farming Mission was established. To implement this Israel Technology lot of pre requisites need to be done. In this regard, a State Level Empowered committee has been constituted under the chairmanship of Additional Chief Secretary & Development Commissioner involving Secretaries of concerned Departments. This committee will give suitable suggestions and directions to the activities taken up periodically by the Mission. Capacity building and knowledge transfer is an important aspect in implementation of this programme. With a view to implement this programme, services of Agriculture & Horticulture Universities are made use of. Roles of 4 State Agriculture Universities & one Horticulture University is essential. Already several elaborated meetings have been

ಕ್ರ.ಸಂ	ಪ್ರಶ್ನೆ	ಉತ್ತರ
		conducted with Vice-Chancellors of these 5 Universities. Sub-Committees have been constituted involving 5 Universities. In addition, Universities have been delegated following responsibilities to implement the programme: • University of Agriculture Sciences, Bangalore-Layout of Demonstration plots. • University of Agriculture Sciences, Dharwad- Awareness creation and preparation of hand book on Horticulture practices • University of Agriculture Sciences, Raichur-Creation of topics for Awareness creation. • University of Agriculture and Horticulture Sciences, Shivmoga-Preparation of curriculum for one year diploma for Agriculture /Horticulture Graduates. • University of Horticulture Sciences, Bagalkote - Reporting information on Compilation of Good Agriculture/Horticulture practices. These Universities have already submitted draft reports, they will be reviewed and emphasis will be given for further action. In this regard, one day State Level Workshop was organized on 10th January 2020 at G.K.V.K Bangalore and at this juncture detailed deliberations were made regarding final stages of preparation for implementation of the programme. Awareness creation programme for farmers regarding steps to be followed in implementing Isreal Technology based Integrated Farming System, Special demonstration plots were laid out during Krishi Mela-2019 held at G.K.V.K

ಕ್ರ.ಸಂ	ಪ್ರಶ್ನೆ	ಉತ್ತರ
		Bangalore. During this programme lakhs of farmers have participated and availed information regarding new Agriculture Technology. In spite of these activities programme could not be implemented as the allocation was not provided in the Budget.
ಇ	ಸರ್ಕಾರವು ಕೃಷಿ ಮತ್ತು ನೀರಾವರಿಗೆ ಹೆಚ್ಚಿನ ಆದ್ಯತೆ ನೀಡುವ ಸಲುವಾಗಿ ಪ್ರಸಕ್ತ ಸಾಲಿನಲ್ಲಾದರೂ ಇಸ್ರೇಲ್ ಮಾದರಿಯ ಕೃಷಿ ಪದ್ಧತಿಯನ್ನು ಜಾರಿಗೊಳಿಸುವುದೇ; ಹಾಗಿದ್ದಲ್ಲಿ ಇದಕ್ಕಾಗಿ ಮೀಸಲಿರಿಸಿರುವ ಅನುದಾನದ ಮೊತ್ತವೆಷ್ಟು? (ಸಂಪೂರ್ಣ ಮಾಹಿತಿ ನೀಡುವುದು)	ಕೃಷಿ ಇಲಾಖೆ, ತೋಟಗಾರಿಕೆ ಇಲಾಖೆ ಮತ್ತು ನೀರಾವರಿ ಇಲಾಖೆಗಳ ನಡುವೆ ಸಮನ್ವಯ ಮೂಡಿಸುವುದರೊಂದಿಗೆ ಈ ಮಿಷನ್ ಕಾರ್ಯನಿರ್ವಹಿಸುತ್ತಿದೆ. 2020-21 ಸಾಲಿನ ಆರ್ಥಿಕ ವರ್ಷದಲ್ಲಿ ಇಸ್ರೇಲ್ ತಂತ್ರಜ್ಞಾನ ಆಧಾರಿತ ಕೃಷಿ ಪದ್ಧತಿ ಅನುಷ್ಠಾನ ಕಾರ್ಯಕ್ರಮಕ್ಕೆ ಅನುದಾನ ನಿಗದಿಪಡಿಸಲಾಗಿರುವುದಿಲ್ಲ. This Mission is working towards bringing about co-ordination among Agriculture, Horticulture & Irrigation Departments. No Financial Allocation has been made during 2020-21 for implementation of this programme.

ಕೃಇ/42/ಕೃಕೈಉ/2021

(ಬಿ.ಸಿ.ಪಾಟೀಲ್)
ಕೃಷಿ ಸಚಿವರು

12

ಕರ್ನಾಟಕ ವಿಧಾನಸಭೆ

ಚುಕ್ಕೆಗುರುತಿನ ಪ್ರಶ್ನೆ ಸಂಖ್ಯೆ : 1855

ಸದಸ್ಯರ ಹೆಸರು : ಶ್ರೀ ಅಬ್ಬಯ್ಯ ಪ್ರಸಾದ್ (ಹುಬ್ಬಳ್ಳಿ-ಧಾರವಾಡ ಪೂರ್ವ)

ಉತ್ತರಿಸಬೇಕಾದ ಸಚಿವರು : ಉಪ ಮುಖ್ಯಮಂತ್ರಿಗಳು ಹಾಗೂ ಸಾರಿಗೆ ಸಚಿವರು

ಉತ್ತರಿಸಬೇಕಾದ ದಿನಾಂಕ : 17-03-2021

ಕ್ರ ಸಂ.	ಪ್ರಶ್ನೆ	ಉತ್ತರ
(ಅ)	ರಾಜ್ಯದಲ್ಲಿರುವ ಆರ್.ಟಿ.ಓ. ಕೇಂದ್ರಗಳು ಎಷ್ಟು ಮತ್ತು ಯಾವುವು; (ಸಂಪೂರ್ಣ ವಿವರ ನೀಡುವುದು)	ರಾಜ್ಯದ ಸಾರಿಗೆ ಇಲಾಖೆಯಲ್ಲಿ ಪ್ರಸ್ತುತ ಜಿಲ್ಲಾ ಕೇಂದ್ರ ಮತ್ತು ತಾಲ್ಲೂಕು ನಗರ ಕೇಂದ್ರಗಳಲ್ಲಿ ಉಪ ಸಾರಿಗೆ ಆಯುಕ್ತರು / ಹಿರಿಯ ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಛೇರಿ, ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಛೇರಿ ಮತ್ತು ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಒಟ್ಟು 67 ಕಛೇರಿಗಳು ಕಾರ್ಯ ನಿರ್ವಹಿಸುತ್ತಿದ್ದು, ವಿವರಗಳನ್ನು ಅನುಬಂಧದಲ್ಲಿ ಒದಗಿಸಲಾಗಿದೆ.
(ಆ)	ಕಳೆದ ಸಾಲಿನಲ್ಲಿ ರಾಜ್ಯ ಸರ್ಕಾರದ ಬೊಕ್ಕಸಕ್ಕೆ ಸಂದಾಯವಾಗಿರುವ ಮೊತ್ತವೆಷ್ಟು; (ಮಾಹಿತಿ ನೀಡುವುದು)	2019-20 ನೇ ಸಾಲಿನಲ್ಲಿ ಸಾರಿಗೆ ಇಲಾಖೆಗೆ ರೂ.7,100 ಕೋಟಿಗಳ ರಾಜಸ್ವ ಸಂಗ್ರಹ ಗುರಿಯನ್ನು ನಿಗಧಿಪಡಿಸಲಾಗಿದ್ದು, ಗುರಿಗೆ ಎದುರಾಗಿ ರೂ.6,683.51 ಕೋಟಿಗಳನ್ನು ಸಂಗ್ರಹಿಸಲಾಗಿರುತ್ತದೆ.
(ಇ)	ಕಳೆದ ಸಾಲಿನಲ್ಲಿ ವಿವಿಧ ಮಾದರಿಯ ವಾಹನಗಳ ನೋಂದಣಿಯಿಂದ ಸರ್ಕಾರಕ್ಕೆ ಬಂದಿರುವ ಆದಾಯವೆಷ್ಟು?	2019-20 ನೇ ಸಾಲಿನಲ್ಲಿ ವಿವಿಧ ಮಾದರಿಯ ವಾಹನಗಳಿಂದ ನೋಂದಣಿ ಶುಲ್ಕ ರೂ.206.14 ಕೋಟಿಗಳು ಮತ್ತು ತೆರಿಗೆಯಿಂದ ರೂ.3,856.09 ಕೋಟಿಗಳಂತೆ ಒಟ್ಟು ಮೊತ್ತ ರೂ.4,062.23 ಕೋಟಿಗಳನ್ನು ನೋಂದಣಿ ಸಮಯದಲ್ಲಿ ಸಂಗ್ರಹಿಸಲಾಗಿದೆ.

ಟಿಡಿ 51 ಟಿಡಿಕ್ಯೂ 2021

(ಲಕ್ಷ್ಮಣ ಸಂಗಪ್ಪ ಸವದಿ)
ಉಪ ಮುಖ್ಯಮಂತ್ರಿಗಳು ಹಾಗೂ
ಸಾರಿಗೆ ಸಚಿವರು.

ಮಾನ್ಯ ವಿಧಾನಸಭಾ ಸದಸ್ಯರಾದ ಶ್ರೀ ಅಬ್ಬಯ್ಯ ಪ್ರಸಾದ್ (ಹುಬ್ಬಳ್ಳಿ-ಧಾರವಾಡ ಪೂರ್ವ) ಇವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 1855 ಕ್ಕೆ "ಅನುಬಂಧ"

ಕಛೇರಿಯ ನೋಂದಣಿ ಸಂಖ್ಯೆವಾರು ವಿವರ

ಕ್ರಮ ಸಂಖ್ಯೆ	ಕಛೇರಿ ನೋಂದಣಿ ಗುರುತಿನ ಸಂಖ್ಯೆ	ಕಛೇರಿಯ ಹೆಸರು
1.	ಕೆಎ – 01	ಪ್ರಾ.ಸಾ.ಅ., ಬೆಂಗಳೂರು (ಕೇಂದ್ರ)
2.	ಕೆಎ – 02	ಪ್ರಾ.ಸಾ.ಅ., ಬೆಂಗಳೂರು (ಪಶ್ಚಿಮ)
3.	ಕೆಎ – 03	ಪ್ರಾ.ಸಾ.ಅ., ಬೆಂಗಳೂರು (ಪೂರ್ವ)
4.	ಕೆಎ – 04	ಪ್ರಾ.ಸಾ.ಅ., ಬೆಂಗಳೂರು (ಉತ್ತರ)
5.	ಕೆಎ – 05	ಪ್ರಾ.ಸಾ.ಅ., ಬೆಂಗಳೂರು (ದಕ್ಷಿಣ)
6.	ಕೆಎ – 06	ಪ್ರಾ.ಸಾ.ಅ., ತುಮಕೂರು
7.	ಕೆಎ – 07	ಪ್ರಾ.ಸಾ.ಅ., ಕೋಲಾರ
8.	ಕೆಎ – 08	ಪ್ರಾ.ಸಾ.ಅ., ಕೆ.ಜಿ.ಎಫ್.,
9.	ಕೆಎ – 09	ಉಪ ಸಾರಿಗೆ ಆಯುಕ್ತರು & ಹಿರಿಯ ಪ್ರಾ.ಸಾ.ಅ., ಮೈಸೂರು (ಪಶ್ಚಿಮ)
10.	ಕೆಎ – 10	ಪ್ರಾ.ಸಾ.ಅ., ಚಾಮರಾಜನಗರ
11.	ಕೆಎ – 11	ಪ್ರಾ.ಸಾ.ಅ., ಮಂಡ್ಯ
12.	ಕೆಎ – 12	ಪ್ರಾ.ಸಾ.ಅ., ಮಡಿಕೇರಿ
13.	ಕೆಎ – 13	ಪ್ರಾ.ಸಾ.ಅ., ಹಾಸನ
14.	ಕೆಎ – 14	ಪ್ರಾ.ಸಾ.ಅ., ಶಿವಮೊಗ್ಗ
15.	ಕೆಎ – 15	ಪ್ರಾ.ಸಾ.ಅ., ಸಾಗರ
16.	ಕೆಎ – 16	ಪ್ರಾ.ಸಾ.ಅ., ಚಿತ್ರದುರ್ಗ
17.	ಕೆಎ – 17	ಪ್ರಾ.ಸಾ.ಅ., ದಾವಣಗೆರೆ
18.	ಕೆಎ – 18	ಪ್ರಾ.ಸಾ.ಅ., ಚಿಕ್ಕಮಗಳೂರು
19.	ಕೆಎ – 19	ಉಪ ಸಾರಿಗೆ ಆಯುಕ್ತರು & ಹಿರಿಯ ಪ್ರಾ.ಸಾ.ಅ., ಮಂಗಳೂರು
20.	ಕೆಎ – 20	ಪ್ರಾ.ಸಾ.ಅ., ಉಡುಪಿ
21.	ಕೆಎ – 21	ಪ್ರಾ.ಸಾ.ಅ., ಪುತ್ತೂರು
22.	ಕೆಎ – 22	ಪ್ರಾ.ಸಾ.ಅ., ಬೆಳಗಾವಿ
23.	ಕೆಎ – 23	ಪ್ರಾ.ಸಾ.ಅ., ಚಿಕ್ಕೋಡಿ
24.	ಕೆಎ – 24	ಸ.ಪ್ರಾ.ಸಾ.ಅ., ಬೈಲಹೊಂಗಲ

--2

25.	ಕೆಎ – 25	ಪ್ರಾ.ಸಾ.ಅ., ಧಾರವಾಡ (ಪಶ್ಚಿಮ)
26.	ಕೆಎ – 26	ಪ್ರಾ.ಸಾ.ಅ., ಗದಗ
27.	ಕೆಎ – 27	ಪ್ರಾ.ಸಾ.ಅ., ಹಾವೇರಿ
28.	ಕೆಎ – 28	ಪ್ರಾ.ಸಾ.ಅ., ವಿಜಯಪುರ
29.	ಕೆಎ – 29	ಪ್ರಾ.ಸಾ.ಅ., ಬಾಗಲಕೋಟೆ
30.	ಕೆಎ – 30	ಪ್ರಾ.ಸಾ.ಅ., ಕಾರವಾರ
31.	ಕೆಎ – 31	ಪ್ರಾ.ಸಾ.ಅ., ಶಿರಸಿ
32.	ಕೆಎ – 32	ಉಪ ಸಾರಿಗೆ ಆಯುಕ್ತರು & ಹಿರಿಯ ಪ್ರಾ.ಸಾ.ಅ., ಕಲಬುರಗಿ
33.	ಕೆಎ – 33	ಪ್ರಾ.ಸಾ.ಅ., ಯಾದಗಿರಿ
34.	ಕೆಎ – 34	ಪ್ರಾ.ಸಾ.ಅ., ಬಳ್ಳಾರಿ
35.	ಕೆಎ – 35	ಪ್ರಾ.ಸಾ.ಅ., ಹೊಸಪೇಟೆ
36.	ಕೆಎ – 36	ಪ್ರಾ.ಸಾ.ಅ., ರಾಯಚೂರು
37.	ಕೆಎ – 37	ಪ್ರಾ.ಸಾ.ಅ., ಕೊಪ್ಪಳ
38.	ಕೆಎ – 38	ಪ್ರಾ.ಸಾ.ಅ., ಬೀದರ್
39.	ಕೆಎ – 39	ಪ್ರಾ.ಸಾ.ಅ., ಬಾಲ್ಕಿ
40.	ಕೆಎ – 40	ಪ್ರಾ.ಸಾ.ಅ., ಚಿಕ್ಕಬಳ್ಳಾಪುರ
41.	ಕೆಎ – 41	ಪ್ರಾ.ಸಾ.ಅ., ಜ್ಞಾನಭಾರತಿ, ಬೆಂಗಳೂರು
42.	ಕೆಎ – 42	ಪ್ರಾ.ಸಾ.ಅ., ರಾಮನಗರ
43.	ಕೆಎ – 43	ಸ.ಪ್ರಾ.ಸಾ.ಅ., ದೇವನಹಳ್ಳಿ
44.	ಕೆಎ – 44	ಸ.ಪ್ರಾ.ಸಾ.ಅ., ತಿಪಟೂರು
45.	ಕೆಎ – 45	ಸ.ಪ್ರಾ.ಸಾ.ಅ., ಹುಣಸೂರು
46.	ಕೆಎ – 46	ಸ.ಪ್ರಾ.ಸಾ.ಅ., ಸಕಲೇಶಪುರ
47.	ಕೆಎ – 47	ಸ.ಪ್ರಾ.ಸಾ.ಅ., ಹೊನ್ನಾವರ
48.	ಕೆಎ – 48	ಸ.ಪ್ರಾ.ಸಾ.ಅ., ಜಮಖಂಡಿ
49.	ಕೆಎ – 49	ಸ.ಪ್ರಾ.ಸಾ.ಅ., ಗೋಕಾಕ್
50.	ಕೆಎ – 50	ಪ್ರಾ.ಸಾ.ಅ., ಯಲಹಂಕ, ಬೆಂಗಳೂರು
51.	ಕೆಎ – 51	ಪ್ರಾ.ಸಾ.ಅ., ಎಲೆಕ್ಟ್ರಾನಿಕ್ ಸಿಟಿ, ಬೆಂಗಳೂರು
52.	ಕೆಎ – 52	ಪ್ರಾ.ಸಾ.ಅ., ನೆಲಮಂಗಲ
53.	ಕೆಎ – 53	ಪ್ರಾ.ಸಾ.ಅ., ಕೆ.ಆರ್.ಪುರಂ, ಬೆಂಗಳೂರು
54.	ಕೆಎ – 54	ಸ.ಪ್ರಾ.ಸಾ.ಅ., ನಾಗಮಂಗಲ

55.	ಕೆಎ – 55	ಪ್ರಾ.ಸಾ.ಅ., ಮೈಸೂರು (ಪೂರ್ವ)
56.	ಕೆಎ – 56	ಸ.ಪ್ರಾ.ಸಾ.ಅ., ಬಸವಕಲ್ಯಾಣ
57.	ಕೆಎ – 57	ಪ್ರಾ.ಸಾ.ಅ., ಶಾಂತಿನಗರ, ಬೆಂಗಳೂರು
58.	ಕೆಎ – 59	ಪ್ರಾ.ಸಾ.ಅ., ಚಂದಾಪುರ, ಬೆಂಗಳೂರು
59.	ಕೆಎ – 63	ಪ್ರಾ.ಸಾ.ಅ., ಧಾರವಾಡ (ಪೂರ್ವ)
60.	ಕೆಎ – 64	ಸ.ಪ್ರಾ.ಸಾ.ಅ., ಮಧುಗಿರಿ
61.	ಕೆಎ – 65	ಸ.ಪ್ರಾ.ಸಾ.ಅ., ದಾಂಡೇಲಿ
62.	ಕೆಎ – 66	ಸ.ಪ್ರಾ.ಸಾ.ಅ., ತರಿಕೆರೆ
63.	ಕೆಎ – 67	ಸ.ಪ್ರಾ.ಸಾ.ಅ., ಚಿಂತಾಮಣಿ
